ಸಂಪುಟ : 8 ಸಂಚಿಕೆ : 198 ಪುಟ : 4 ಬೆಲೆ : 3.00 ರವಿವಾರ ಸಪ್ಟೆಂಬರ್ 10, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 8 Issue : 198 Pages : 4 Price : 3.00 Sunday September 10, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25




## ಹಿದಾಯಿತ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಪರಿಸರ ದಿನಾಚರಣೆ



■ವಿಜಯಸಾಕ್ಷಿ ಸುದ್ದಿ, ಗದಗ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್ ಗದಗ ತಾಲೂಕು ಹಾಗೂ ಹಿದಾಯಿತ ಪೂರ್ವ ಪ್ರಾಥಮಿಕ ಶಾಲೆಯ ವತಿಯಿಂದ ಶಾಲಾ ಆವರಣದಲ್ಲಿ ಸಸಿ ನೆಡುವ ಮೂಲಕ ಪರಿಸರ ದಿನಾಚರಣೆ ಆಚರಿಸಲಾಯಿತು.

ಡಾ. ನಿಜಾಮುದ್ದೀನ ಅತ್ತಾರ ಕಾರ್ಯಕ್ರಮ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಹಿದಾಯಿತ ಪೂರ್ವ ಪ್ರಾಥಮಿಕ ಶಾಲೆಯ ಸಂಸ್ಥಾಪಕ ಐ.ಎಚ್ ಉಮಚಗಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹಿರಿಯ ಯೋಜನಾಧಿಕಾರಿ ಸುರೇಂದ್ರ ನಾಯ್ಕ ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಹಿದಾಯತ ಪೂರ್ವ ಪ್ರಾಥಮಿಕ ಶಾಲೆಯ ಕಾರ್ಯದರ್ಶಿ ಕೆ.ಐ ಶೇಖ, ಮೇಲ್ವಿಚಾರಕ ಶ್ರೀನಿವಾಸ, ಶಾಲೆಯ ಉಪಾಧ್ಯಕ್ಷ ಎಂ.ಎಂ ಕಾಗದಗಾರ, ಶಾಲೆಯ ಪ್ರಧಾನ ಗುರುಮಾತೆ ಪಿ.ಬಿ ಗುದಗಿ, ಸಮಾಜಸೇವಕರಾದ ತಿರ್ಲಾಪೂರ, ಸರೋಜ ಲಕ್ಷ್ಮೇಶ್ವರ ಉಪಸ್ಥಿತರಿದ್ದರು.

### ಧಾರವಾಡ ಕೃಷಿ ವಿವಿ ಆವರಣದಲ್ಲಿ ‘ಕೃಷಿಮೇಳ– 2023’ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

# ರಾಜ್ಯದ, ರೈತರ ಅಭಿವೃದ್ಧಿಗೆ ಸರ್ಕಾರ ಬದ್ಧ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಭಾರತವು ಕೃಷಿ ಪ್ರಧಾನ ದೇಶವಾಗಿದ್ದರೂ ಸಾಕಷ್ಟು ಜನ ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಮಳೆ ಆಧಾರಿತ ಕೃಷಿ ಭೂಮಿ ಇರುವದರಿಂದ ಮಳೆ ಕೊರತೆಯಾಗಿ ಸಮಸ್ಯೆ ಆಗುತ್ತಿದೆ. ಕೃಷಿ ವಿವಿಗಳು ಒಣಭೂಮಿಯಲ್ಲಿ ಕೃಷಿ ಅಭಿವೃದ್ಧಿಪಡಿಸುವ ಕುರಿತು ಹೆಚ್ಚು ಸಂಶೋಧನೆ ಕೈಗೊಳ್ಳಬೇಕಿದೆ. ಯುವಕರು, ಹೆಚ್ಚುಜನ ಕೃಷಿಯಲ್ಲಿ ತೊಡಗಿಸಿಕೊಳ್ಳುವಂತೆ ಕೃಷಿ ವಿವಿಗಳು ಕಾರ್ಯ ಮಾಡಬೇಕು. ವಿಶ್ವವಿದ್ಯಾಲಯದ ಸಂಶೋಧನೆ, ತಾಂತ್ರಿಕತೆಗಳು ರೈತರ ಜಮೀನುಗಳಿಗೆ ತಲುಪಿದರೆ ಮಾತ್ರ ಸಾರ್ಥಕವಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅವರು ಶನಿವಾರ ಮಧ್ಯಾಹ್ನ ಧಾರವಾಡ ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿ ಆಯೋಜಿಸಿರುವ



‘ಕೃಷಿಮೇಳ– 2023’ ಉದ್ಘಾಟಿಸಿ ಮಾತನಾಡಿದರು.

ಒಣ ಬೇಸಾಯ ಮಾಡುವ ರೈತರ ಬಗ್ಗೆ ವಿಶೇಷ ಕಾಳಜಿ ಇದೆ. ಒಣಬೇಸಾಯ ಮಾಡಲು ಅಗತ್ಯ ಸುಧಾರಿತ ಹೊಸ ತಳಿಗಳ ಸಂಶೋಧನೆ ಮಾಡಬೇಕು. ಬಿತ್ತಿದ ಯಾವುದೇ ಮುಖ್ಯ ಬೆಳೆ ಹಾಳಾದರೆ, ಅದಕ್ಕೆ ಪರ್ಯಾಯವಾದ ▸▸3ನೇ ಪುಟಕ್ಕೆ



> ಕೃಷಿಭಾಗ್ಯ ಯೋಜನೆ ಮುಂದುವರಿಕೆ ಸರಕಾರ ಆದೇಶಿಸಿದೆ. ಧಾರವಾಡ ಕೃಷಿ ವಿವಿಯು, ರಾಷ್ಟ್ರದ 10 ಉತ್ತಮ ಕೃಷಿ ವಿಶ್ವವಿದ್ಯಾಲಯದಗಳಲ್ಲಿ ಸ್ಥಾನ ಪಡೆದಿದೆ. ಸಂಶೋಧನೆ, ಕೃಷಿ ತಾಂತ್ರಿಕತೆ, ಉತ್ತಮ ಬೀಜ ತಳಿಗಳ ಬಿಡುಗಡೆ ಮಾಡುವ ಮೂಲಕ ರೈತರ ಕಣ್ಮಣಿಯಾಗಿದೆ. ರಾಜ್ಯ ಸರಕಾರ ರೈತರ ಬೆಳೆ ವಿಮೆಗಾಗಿ ರೂ.900 ಕೋಟಿ ಮೀಸಲಿಟ್ಟಿದೆ. ಇದರಿಂದ ಬೆಳೆವಿಮೆ ಮಾಡಿಸಿರುವ ಸುಮಾರು 16 ಲಕ್ಷ ರೈತರು ಲಾಭ ಪಡೆಯಲಿದ್ದಾರೆ.
>
> **– ಎನ್.ಚಲುರಾಯಸ್ವಾಮಿ.**
> ಕೃಷಿ ಸಚಿವರು.

> ರಾಜ್ಯ ಸರಕಾರ ಈ ವರ್ಷದಿಂದ ರೈತರಿಗೆ ರೂ. 5 ಲಕ್ಷದವರೆಗೆ ಶೂನ್ಯ ಬಡ್ಡಿ ಸಾಲ ಮತ್ತು ರೂ.15 ಲಕ್ಷದವರೆಗೆ ಕೇವಲ ಶೇ.3ರಷ್ಟು ಬಡ್ಡಿ ನಿಗದಿಗೊಳಿಸಿ, ಕ್ರಮ ಕೈಗೊಳ್ಳಲಾಗಿದೆ. ಮಹಾದಾಯಿ ಯೋಜನೆ ಜಾರಿಗೊಳಿಸಲು ಸರಕಾರ ಬದ್ಧವಾಗಿದೆ. ಕೇಂದ್ರ ಸರಕಾರ ಶೀಘ್ರವಾಗಿ ಸ್ಪಂದಿಸಿ, ಸಮಸ್ಯೆ ಬಗೆಹರಿಸಿದರೆ ಯೋಜನೆ ಅನುಷ್ಠಾನ ಸುಲಭವಾಗಲಿದೆ.
>
> **– ಸಿದ್ದರಾಮಯ್ಯ.**
> ಮುಖ್ಯಮಂತ್ರಿಗಳು.

### ‘ಕೈಗಾರಿಕಾ ಉತ್ಸವ–ಮಾರಾಟ ಮೇಳ’ವನ್ನು ಉದ್ಘಾಟಿಸಿದ ಸಚಿವ ಎಚ್.ಕೆ ಪಾಟೀಲ

# ಉತ್ಪಾದನಾ ಕೈಗಾರಿಕೆಯಿಂದ ಉದ್ಯೋಗ ಸೃಷ್ಟಿ



■ವಿಜಯಸಾಕ್ಷಿ ಸುದ್ದಿ, ಗದಗ

ನರಸಾಪುರ ಕೈಗಾರಿಕಾ ಪ್ರದೇಶ ಹಾಗೂ ರೋಣ ರಸ್ತೆಯನ್ನು ಸಂಪರ್ಕಿಸುವ ರಿಂಗ್ ರೋಡ್ ಕಾಮಗಾರಿಯನ್ನು ಶೀಘ್ರವೇ ಪೂರ್ಣಗೊಳಿಸಲಾಗುವುದು ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವ ಡಾ. ಎಚ್.ಕೆ ಪಾಟೀಲ ಹೇಳಿದರು.

ಶನಿವಾರ ನಗರದ ತೋಂಟ–ದಾರ್ಯ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಗದಗ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಗ್ರಾಮೀಣ ಮತ್ತು ಸಣ್ಣ ಉದ್ಯಮ ವಿಭಾಗ, ಜಿಲ್ಲಾ ಪಂಚಾಯಿತಿ ಸಹಯೋಗದಲ್ಲಿ ಆಯೋಜಿಸಿದ್ದ ‘ಗದಗ ಉತ್ಸವ–2023, ಕೈಗಾರಿಕಾ ಉತ್ಸವ ಹಾಗೂ ಮಾರಾಟ ಮೇಳ’ವನ್ನು ಉದ್ಘಾಟಿಸಿ ಅವರು ಮಾತನಾಡಿದರು. ರಿಂಗ್ ರೋಡ್ ನಿರ್ಮಾಣಕ್ಕೆ ಸಂಬಂಧಿಸಿ, ಜಿಲ್ಲೆಯ ಎಲ್ಲ ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದಾಗ, ರೋಣ ಶಾಸಕ ಜಿ.ಎಸ್ ಪಾಟೀಲರು ರಿಂಗ್ ರೋಡ್ ನಿರ್ಮಾಣಕ್ಕೆ ಹೆಚ್ಚು ಒತ್ತು ಕೊಟ್ಟಿರುವುದು ಗಮನಾರ್ಹ. ಗದಗದಲ್ಲಿ ದೊಡ್ಡ ಕೈಗಾರಿಕಾ ವಸಾಹತು ನಿರ್ಮಾಣವಾಗಬೇಕಿದೆ. ಹಿಂದೊಮ್ಮೆ ಗದಗ ಉತ್ಪಾದನಾ ಕೈಗಾರಿಕೆಗೆ ಹೆಸರಾಗಿತ್ತು. ಆದರೀಗ, ಅತ್ಯಂತ ಸುಲಭವಾಗಿ ಹಣ ಗಳಿಕೆಯ ಉದ್ಯಮದತ್ತ ಉದ್ಯಮಿಗಳು ಒಲವು ಹೊಂದಿದ್ದಾರೆ. ಇದರಿಂದ ಉದ್ಯೋಗ ಸೃಷ್ಟಿ ಸಾಧ್ಯವಿಲ್ಲ. ಉತ್ಪಾದನಾ ಕೈಗಾರಿಕೆಯಿಂದಲೇ ಉದ್ಯೋಗಾವಕಾಶ ಸೃಷ್ಟಿ ಸಾಧ್ಯ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

ಜ.ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ರೋಣ ಶಾಸಕ ಜಿ.ಎಸ್ ಪಾಟೀಲ, ವಿ.ಪ ಸದಸ್ಯ ಎಸ್.ವಿ ಸಂಕನೂರ, ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಮಧುಸೂದನ ಪುಣೇಕರ ಅಧ್ಯಕ್ಷತೆ ವಹಿಸಿದ್ದರು. ಕೈಗಾರಿಕಾ ವಸ್ತು ಪ್ರದರ್ಶನ ಸಮಿತಿ ಅಧ್ಯಕ್ಷ ಚಂದ್ರು ಬಾಳಿಹಳ್ಳಿಮಠ, ಈಶ್ವರಪ್ಪ ಮುನವಳ್ಳಿ, ತಾತನಗೌಡ ಪಾಟೀಲ, ವೀರೇಶ ಕೂಗು, ಶರಣಬಸಪ್ಪ ಗುಡಿಮನಿ, ಪ್ರಕಾಶ ಉಗಲಾಟದ, ರಾಜಣ್ಣ ಮಲ್ಲಾಡದ, ನಾಗೇಶ ಹುಬ್ಬಳ್ಳಿ, ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಮಹಿಳಾ ಘಟಕದ ಜಯಶ್ರೀ ಪಾಟೀಲ ಹಾಗೂ ಸದಸ್ಯೆಯರು ಉಪಸ್ಥಿತರಿದ್ದರು.

ವಸ್ತು ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಸಚಿವ ಎಚ್.ಕೆ ಪಾಟೀಲ, ತೋಂಟದ ಸಿದ್ಧರಾಮ ಶ್ರೀಗಳು ವೀಕ್ಷಿಸಿದರು. 100ಕ್ಕೂ ಹೆಚ್ಚು ಉದ್ಯಮಿಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಿದರು.

> ಗದಗ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಬೆಳವಣಿಗೆಗೆ ನೀಲನಕ್ಷೆ ಸಿದ್ಧಪಡಿಸಲಾಗಿದೆ. ಅದರ ಭಾಗವಾಗಿ ಕೆಎಸ್‌ಟಿಡಿಸಿ ವತಿಯಿಂದ ಗದಗದಲ್ಲಿ ತ್ರಿಸ್ಟಾರ್ ಹೋಟೆಲ್ ಶೀಘ್ರವೇ ನಿರ್ಮಾಣವಾಗಲಿದೆ. ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಚೇರಿಯನ್ನು ಈಗಾಗಲೇ ಆರಂಭಿಸಲಾಗಿದ್ದು, ಭೀಷ್ಮ ಕೆರೆಯಲ್ಲಿ ಮತ್ತೆ ಬೋಟಿಂಗ್ ಆರಂಭಿಸಲು ಸೂಚಿಸಲಾಗಿದೆ.
>
> **– ಎಚ್.ಕೆ ಪಾಟೀಲ.**
> ಜಿಲ್ಲಾ ಉಸ್ತುವಾರಿ ಸಚಿವರು.

# ರಾಷ್ಟ್ರೀಯ ಸೈಕ್ಲಿಂಗ್ ತರಬೇತಿಗೆ ಪವಿತ್ರಾ ಕುರ್ತಕೋಟಿ ಆಯ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ಸೆ.9ರಿಂದ ಸೆ.30ರವರೆಗೆ ಕೇರಳದಲ್ಲಿ ನಡೆಯಲಿರುವ ಎಂಟಿಬಿ. ರಾಷ್ಟ್ರೀಯ ಸೈಕ್ಲಿಂಗ್ ತರಬೇತಿ ಶಿಬಿರಕ್ಕೆ ಗದಗ ಜಿಲ್ಲಾ ಸೈಕ್ಲಿಂಗ್ ಪಟು ಪವಿತ್ರಾ ಕುರ್ತಕೋಟಿ ಆಯ್ಕೆಯಾಗಿದ್ದಾಳೆ.

ಗೃಹ ಸಚಿವ ಜಿ. ಪರೇಮಶ್ವರ ಹಾಗೂ ಸಚಿವ ಹೆಚ್.ಕೆ ಪಾಟೀಲ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ



ಶರಣು ಗೋಗೇರಿ, ಸೈಕ್ಲಿಂಗ್ ತರಬೇತುದಾರ ಅನಂತ ದೇಸಾಯಿ ಪವಿತ್ರಾರನ್ನು ಅಭಿನಂದಿಸಿದ್ದಾರೆ.

### ಉದ್ಯೋಗ ಮೇಳಕ್ಕೆ ಚಾಲನೆ ನೀಡಿದ ಎಸ್.ವಿ ಸಂಕನೂರ ಅಭಿಮತ

# ಸರ್ಕಾರಿ ಉದ್ಯೋಗ ನಿರೀಕ್ಷಿಸದೇ ಸ್ವಯಂ ಉದ್ಯೋಗಿಗಳಾಗಿ

■ವಿಜಯಸಾಕ್ಷಿ ಸುದ್ದಿ, ಗದಗ

ನಿರುದ್ಯೋಗ ಸಮಸ್ಯೆ ಉಲ್ಬಣಗೊಳ್ಳುತ್ತ, ಜಾಗತಿಕ ಸಮಸ್ಯೆಯಾಗಿ ಪರಿಣಮಿಸುತ್ತಿದೆ. ಹೀಗಾಗಿ, ವಿದ್ಯಾವಂತರು ಸ್ವಯಂ ಉದ್ಯೋಗ ಕೈಗೊಳ್ಳಲು ಮುಂದಾಗಬೇಕೆಂದು ವಿಧಾನ ಪರಿಷತ್ ಸದಸ್ಯ ಪ್ರೊ. ಎಸ್.ವ್ಹಿ ಸಂಕನೂರ ಅಭಿಪ್ರಾಯಪಟ್ಟರು.

ಅವರು ಶನಿವಾರ ನಗರದ ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರದಲ್ಲಿ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ, ರೋಟರಿ ಗದಗ ಸೆಂಟ್ರಲ್ ಹಾಗೂ ಇನ್‌ಸ್ಪೈರ್ ಟೆಕ್ನಾಲಜಿಸ್ ವತಿಯಿಂದ ಏರ್ಪಡಿಸಿದ್ದ ಉದ್ಯೋಗ ಮೇಳವನ್ನು ಉದ್ಘಾಟಿಸಿ ಮಾತನಾಡಿದರು.

ಕೇಂದ್ರ ಮತ್ತು ರಾಜ್ಯ ಸರಕಾರದಿಂದ ಸಣ್ಣ ಮತ್ತು ಬೃಹತ್ ಕೈಗಾರಿಕಾ ಉದ್ಯಮಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಬೇಕು. ವಿದ್ಯಾವಂತ ನಿರುದ್ಯೋಗಿಗಳು ಸರಕಾರಿ ಉದ್ಯೋಗದ ನಿರೀಕ್ಷೆ ಮಾಡದೇ ಸರಕಾರದ ಸೌಲಭ್ಯಗಳನ್ನು, ಬ್ಯಾಂಕ್‌ಗಳ ಆರ್ಥಿಕ ನೆರವನ್ನು ಪಡೆದುಕೊಂಡು ಸ್ವಯಂ ಉದ್ಯೋಗ ಕೈಗೊಳ್ಳುವ ಮೂಲಕ ತಾವೇ ಉದ್ಯೋಗ ಸೃಷ್ಟಿಸಬೇಕೆಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ▸▸3 ನೇ ಪುಟಕ್ಕೆ



> ಹೊಸ ಶಿಕ್ಷಣ ನೀತಿ ಸಂಪೂರ್ಣವಾಗಿ ಜಾರಿಗೊಳ್ಳುವ ಮೂಲಕ ಯುವಕರಿಗೆ ಉನ್ನತ ಶಿಕ್ಷಣ ಲಭ್ಯವಾಗಬೇಕು. ಎಪಿಜೆ ಅಬ್ದುಲ್ ಕಲಾಂ ಅವರು ಭಾರತ ಪ್ರಗತಿ ಹೊಂದಿ ಪ್ರಗತಿಪರ ರಾಷ್ಟ್ರಗಳ ಸೇರುವಂತಾಗಬೇಕು ಎಂದು ಕನಸು ಹೊಂದಿದ್ದರು. ಅದು ಯುವಕರಿಂದ ಸಾಕಾರಗೊಳ್ಳಲು ಸಾಧ್ಯ. ಆ ಕಾರ್ಯ ಶೀಘ್ರವೇ ಆಗಲಿ. ಇಂದಿನ ಉದ್ಯೋಗ ಮೇಳದಲ್ಲಿ ಸುಮಾರು 25ಕ್ಕೂ ಹೆಚ್ಚು ಕಂಪನಿಗಳು ಪಾಲ್ಗೊಳ್ಳುವ ಮೂಲಕ ಪ್ರತಿಭಾನ್ವಿತ ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲು ಮುಂದೆ ಬಂದಿರುವದು ಶ್ಲಾಘನೀಯ.
>
> **– ಎಸ್.ವಿ ಸಂಕನೂರ.**
> ವಿಧಾನ ಪರಿಷತ್ ಸದಸ್ಯರು.

**ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ, ಗದಗ**

ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ಗ್ರಾಮೀಣ ಮತ್ತು ಸಣ್ಣ ಉದ್ಯಮ ವಿಭಾಗ, ಜಿಲ್ಲಾ ಪಂಚಾಯತ್, ಗದಗ ಇವರ ಸಂಯುಕ್ತ ಆಶ್ರಯದಲ್ಲಿ

**ಗದಗ ಉತ್ಸವ–2023**

**ಶ್ರೇಷ್ಠ ವರ್ತಕ, ಶೇಷ್ಠ ಉದ್ಯಮಿ ಪ್ರಶಸ್ತಿ ಪ್ರದಾನ**

ದಿನಾಂಕ 10–9–2023 ರಂದು ರವಿವಾರ, ಸಾಯಂಕಾಲ 5–00 ಘಂಟೆಗೆ

ಸ್ಥಳ: ಶ್ರೀ ತೋಂಟದ ಸಿದ್ಧಲಿಂಗೇಶ್ವರ ಕಲ್ಯಾಣ ಕೇಂದ್ರ, ಗದಗ.

ಸಾನಿಧ್ಯ : ಪ.ಪೂ. ಶ್ರೀ ಜಗದ್ಗುರು ಅಭಿನವ ಶ್ರೀ ಬೂದೀಶ್ವರ ಮಹಾಸ್ವಾಮಿಗಳು, ಸಂಸ್ಥಾನಮಠ, ಹೊಸಳ್ಳಿ

ಮುಖ್ಯ ಅತಿಥಿಗಳು : ಡಾ. ಎಚ್. ಕೆ. ಪಾಟೀಲ
ಮಾನ್ಯ ಕಾನೂನು, ನ್ಯಾಯ ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಶರಣಬಸಪ್ಪ ದರ್ಶನಾಪೂರ್
ಮಾನ್ಯ ಸಚಿವರು, ಸಣ್ಣ ಕೈಗಾರಿಕೆ, ಸಾರ್ವಜನಿಕ ಉದ್ಯಮಗಳ ಇಲಾಖೆ, ಕರ್ನಾಟಕ ಸರ್ಕಾರ
ಶ್ರೀ ಬಿ. ವಿ.ಗೋಪಾಲರಡ್ಡಿ, ಮಾನ್ಯ ಅಧ್ಯಕ್ಷರು, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಬೆಂಗಳೂರು
ಶ್ರೀ ವಿನಯ ಜವಳಿ ಮಾನ್ಯ ಅಧ್ಯಕ್ಷರು, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ಹುಬ್ಬಳ್ಳಿ
ಶ್ರೀಮತಿ ಸಿ. ಶಿಖಾ ಮಾನ್ಯ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ ಬೆಂಗಳೂರು, ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

ಅಧ್ಯಕ್ಷತೆ : ಶ್ರೀ ಮಧುಸೂಧನ ಡಿ. ಪುಣೇಕರ, ಮಾನ್ಯ ಅಧ್ಯಕ್ಷರು ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ, ಗದಗ

**ಜೀವಮಾನ ಸಾಧನೆ ಪ್ರಶಸ್ತಿ ಪುರಸ್ಕೃತರು**
ಶ್ರೀ ದೇವದಾಸ ಎಸ್. ಕಾಮತ ಮಾಜಿ ಅಧ್ಯಕ್ಷರು, ಜಿ.ಡಿ.ಸಿ.ಸಿ.ಆಯ್, ಗದಗ
ಶ್ರೀ ಎಸ್. ಪಿ. ಸಂಶಿಮಠ ಮಾಜಿ ಅಧ್ಯಕ್ಷರು, ಜಿ.ಡಿ.ಸಿ.ಸಿ.ಆಯ್, ಗದಗ

**ಪ್ರಶಸ್ತಿ ಪುರಸ್ಕೃತರು**
ಶ್ರೀ ಬಸವರಾಜ ಕಳಕಪ್ಪ ಪುರ್ತಗೇರಿ ಶ್ರೇಷ್ಠ ವರ್ತಕರು, ಪ್ರಮೋದ ಟ್ರೇಡರ್ಸ್, ಗಜೇಂದ್ರಗಡ
ಶ್ರೀ ಲಿಂಗಬಸಯ್ಯ ರುದ್ರಯ್ಯ ಮಠದ ಶ್ರೇಷ್ಠ ವರ್ತಕರು, ಸಿದ್ಧಲಿಂಗೇಶ್ವರ ಟ್ರೇಡಿಂಗ್ ಕಂ., ಶಿರೋಳ
ಶ್ರೀ ವೀರಣ್ಣ ಫಕ್ಕೀರಪ್ಪ ಬೇವಿನಮರದ ಶ್ರೇಷ್ಠ ವರ್ತಕರು, ಅನ್ನದಾನೇಶ್ವರ ಟ್ರೇಡರ್ಸ್, ಮುಂಡರಗಿ
ಶ್ರೀ ಭೂಷಣ ಪ್ರಕಾಶ ಶಹಾ ಶ್ರೇಷ್ಠ ಉದ್ಯಮಿ, ವಿಶಾಲ ರೆಸಾರ್ಟ್ ಮತ್ತು ವಿಮಲ ಹಾಸ್ಪಿಟಾಲಿಟಿ ಪ್ರಾ. ಲಿ., ಗದಗ
ಶ್ರೀ ಗವಿಸಿದ್ಧೇಶ್ವರ ಮಲ್ಲಪ್ಪ ಪಲ್ಲೇದ ಶ್ರೇಷ್ಠ ಉದ್ಯಮಿ, ಎಸ್.ಎಸ್. ಗ್ರೂಪ್ಸ್, ಶಿವಸಂಗಮ ಸಮೂಹ ಸಂಸ್ಥೆ, ಗದಗ
ಶ್ರೀ ಬಸವರಾಜ ಶಂಕ್ರಪ್ಪ ಹುಡೇದ ಶ್ರೇಷ್ಠ ಉದ್ಯಮಿ ಯುನಿಕ್ ಕಾಟನ್ ಜಿನ್ನಿಂಗ್ & ಪ್ರೆಸ್ಸಿಂಗ್ ಇಂಡಸ್ಟ್ರೀಜ್, ಲಕ್ಷ್ಮೇಶ್ವರ
ಶ್ರೀ ಸೋಮಶೇಖರ ಶ್ರೀಶೈಲಪ್ಪ ನರೋಣಿ ಶ್ರೇಷ್ಠ ಉದ್ಯಮಿ ಎಸ್.ಎಸ್. ನರೋಣಿ, ಹೊಳೆಆಲೂರ

**ಸ್ವಾಗತ ಬಯಸುವವರು**

**ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆ, ಗದಗ**

ಅಧ್ಯಕ್ಷರು: ಶ್ರೀ ಮಧುಸೂಧನ ಡಿ. ಪುಣೇಕರ, ಉಪಾಧ್ಯಕ್ಷರು: ಶ್ರೀ ಈಶ್ವರಪ್ಪ ಸಿ. ಮುನವಳ್ಳಿ, ಶ್ರೀ ತಾತನಗೌಡ ಎಸ್. ಪಾಟೀಲ, ಶ್ರೀ ವಿರೇಶ ಎಸ್. ಕೂಗು, ಗೌ. ಕಾರ್ಯದರ್ಶಿ: ಶ್ರೀ ಶರಣಬಸಪ್ಪ ಎಸ್. ಗುಡಿಮನಿ, ಸಹ ಗೌ. ಕಾರ್ಯದರ್ಶಿ: ಶ್ರೀ ಪ್ರಕಾಶ ಎಸ್. ಉಗಲಾಟದ, ಶ್ರೀ ರಾಜಣ್ಣ ಜಿ. ಮಲ್ಲಾಡದ, ಕೋಶಾಧ್ಯಕ್ಷರು: ಶ್ರೀ ನಾಗೇಶ ತಿರಕಪ್ಪ ಹುಬ್ಬಳ್ಳಿ

**ಕೈಗಾರಿಕಾ ವಸ್ತು ಪ್ರದರ್ಶನ ಸಮಿತಿ**

ಚೇರಮನ್: ಶ್ರೀ ಚಂದ್ರು ಜೆ. ಬಾಳಿಹಳ್ಳಿಮಠ, ಕೋ–ಚೇರಮನ್: ಶ್ರೀ ಸದಾಶಿವಯ್ಯ ಎಸ್. ಮದರಿಮಠ, ಸ್ವಾಗತ: ಶ್ರೀ ಸೋಮನಾಥ ಕೆ. ಜಾಲಿ, ಮಾರುಕಟ್ಟೆ: ಶ್ರೀ ಹರೀಶಕುಮಾರ ಎಸ್. ಶಹಾ, ನಿರ್ಮಾಣ: ಶ್ರೀ ಎಸ್.ಆರ್. ನಾಲತ್ವಾಡಮಠ, ಹಣಕಾಸು: ಶ್ರೀ ಬಸವರಾಜ ಎಸ್. ಅಂಗಡಿ, ಕ್ರೀಯಾ: ಶ್ರೀ ಶಿವಕುಮಾರ ಎಚ್. ಪಾಟೀಲ, ಮಳಿಗೆ ಮೇಲ್ವಿಚಾರಣಾ : ಶ್ರೀ ಸಂಜಯ ಟಿ. ಬಾಗಮಾರ, ಪ್ರಚಾರ: ಶ್ರೀ ಜಯದೇವ ಎಂ. ಮೆಣಸಗಿ, ಕಾರ್ಯಕ್ರಮ: ಶ್ರೀ ವ್ಹಿ.ಕೆ. ಗುರುಮಠ, ವೇದಿಕೆ ಅಲಂಕಾರ: ಶ್ರೀ ವ್ಹಿ.ಸಿ. ಧನ್ನೂರಹಿರೇಮಠ, ಊಟ/ಉಪಚಾರ : ಶ್ರೀ ಬಾಲಚಂದ್ರ ಭರಮಗೌಡ್ರ ಜಾಹೀರಾತು: ಶ್ರೀ ದಾನಯ್ಯ ವಿ. ಗಣಾಚಾರಿ, ಹಂಚಿಕೆ: ಶ್ರೀ ಲಿಂಗರಾಜ ಬಿ. ತೋಟದ, ಸಾಂಸ್ಕೃತಿಕ ಕಾರ್ಯಕ್ರಮ: ಶ್ರೀ ವಿಜಯಕುಮಾರ ಹಿರೇಮಠ

ಸಾಂಸ್ಕೃತಿಕ ಕಾರ್ಯಕ್ರಮಗಳು : ಪ್ರತಿದಿನ ಸಾಯಂಕಾಲ 5–00 ಗಂಟೆಯಿಂದ ಪ್ರಾರಂಭ

**ಸರ್ವರಿಗೂ ಆದರದ ಸ್ವಾಗತ**

# ಸೆ.14,15ರಂದು ರೋಣ ತಾಲೂಕು ಮಟ್ಟದ ದಸರಾ ಕ್ರೀಡಾಕೂಟ

**■ವಿಜಯಸಾಕ್ಷಿ ಸುದ್ದಿ, ಗದಗ**

2023-24ನೇ ಸಾಲಿನಲ್ಲಿ ರೋಣ ತಾಲೂಕು ಮಟ್ಟದ ದಸರಾ ಕ್ರೀಡಾಕೂಟಗಳನ್ನು ಪುರುಷ ಹಾಗೂ ಮಹಿಳೆಯರಿಗೆ ಸೆಪ್ಟೆಂಬರ್ 14 ಮತ್ತು 15 ರಂದು ತಾಲೂಕಾ ಕ್ರೀಡಾಂಗಣ ರೋಣದಲ್ಲಿ ನಡೆಸಲಾಗುವುದು.

ಆಸಕ್ತ ಕ್ರೀಡಾಪಟುಗಳು ತಮ್ಮ ಹೆಸರನ್ನು ಸೆಪ್ಟೆಂಬರ್ 12 ರೊಳಗಾಗಿ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳು, ರೋಣ ತಾಲೂಕು ಇವರಲ್ಲಿ ನೊಂದಾಯಿಸಿಕೊಳ್ಳುವುದು. ಸೆಪ್ಟೆಂಬರ್ 14 ರಂದು ಮುಂಜಾನೆ 9 ಗಂಟೆಗೆ ಉದ್ಘಾಟನೆ ನಡೆಸಲಾಗುವುದು. ಉದ್ಘಾಟನಾ ಸಮಾರಂಭಕ್ಕೆ ರೋಣ ತಾಲೂಕಿನ ಆಸಕ್ತ ಕ್ರೀಡಾಪಟುಗಳು ಹಾಜರಿರುವುದು. ನೋಂದಾಯಿತ ಯುವಕ/ಯುವತಿ ಸಂಘಗಳು ಮಾತ್ರ ಗುಂಪು ಆಟಗಳಲ್ಲಿ ಭಾಗವಹಿಸಲು ಅವಕಾಶವಿದೆ. ಈ ಕೆಳಕಂಡಂತೆ ಕ್ರೀಡಾಕೂಟಗಳನ್ನು ಏರ್ಪಡಿಸಲಾಗುವುದು.

**ದಸರಾ ಕ್ರೀಡಾ ಕೂಟದ ಸ್ಪರ್ಧೆಗಳ ವಿವರ:**

**ಪುರುಷರಿಗಾಗಿ ಅಥ್ಲೇಟಿಕ್ಸ್ ಸ್ಪರ್ಧೆಗಳು:** 100ಮೀ. 200ಮೀ, 400ಮೀ. 800ಮೀ. 1500ಮೀ. 5000ಮೀ 10000ಮೀ, ಓಟ ಉದ್ದ ಜಿಗಿತ, ಎತ್ತರ ಜಿಗಿತ, ಟ್ರಿಪಲ್ ಜಂಪ್, ಗುಂಡು ಎಸೆತ ಜಾವಲಿನ ಎಸೆತ, ಚಕ್ರ ಎಸೆತ, 110ಮೀ ಹರ್ಡಲ್ಸ್, 4*100 ಮೀ. ರಿಲೇ, 4*400 ಮೀ. ರಿಲೇ

**ಗುಂಪು ಸ್ಪರ್ಧೆಗಳು:**- ವಾಲಿಬಾಲ್, ಕಬಡ್ಡಿ, ಖೋ-ಖೋ, ಥ್ರೋ ಬಾಲ್, ಫುಟ್‌ಬಾಲ್, ಯೋಗ

**ಮಹಿಳೆಯರಿಗಾಗಿ ಅಥ್ಲೇಟಿಕ್ಸ್ :** 100ಮೀ. 200ಮೀ, 400ಮೀ. 800ಮೀ. 1500ಮೀ. 3000,ಮೀ ಓಟ ಉದ್ದ ಜಿಗಿತ, ಎತ್ತರ ಜಿಗಿತ, ಟ್ರಿಪಲ್ ಜಂಪ್, ಗುಂಡು ಎಸೆತ, ಜಾವಲಿನ ಎಸೆತ, ಚಕ್ರ ಎಸೆತ, 100ಮೀ ಹರ್ಡಲ್ಸ್, 4*100 ಮೀ. ರಿಲೇ, 4*400 ಮೀ. ರಿಲೇ

**ಗುಂಪು ಸ್ಪರ್ಧೆಗಳು:**

ವಾಲಿಬಾಲ್, ಕಬಡ್ಡಿ, ಖೋ-ಖೋ, ಥ್ರೋ ಬಾಲ್, ಯೋಗ

ರೋಣ ತಾಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳು ರೋಣ ತಾಲೂಕಿನವರೇ ಆಗಿರಬೇಕು. ಹಾಗೂ ಆಧಾರ ಕಾರ್ಡ್ ಅಥವಾ ಗ್ರಾಮ ಪಂಚಾಯತಿಯ ರಹವಾಸಿ ಪತ್ರ ಸದರಿ ದಿನದಂದು ಹಾಜರಪಡಿಸುವುದು. ನೋಂದಾಯಿತ ಯುವಕ/ಯುವತಿ ಸಂಘಗಳು ಮಾತ್ರ ಗುಂಪು ಆಟಗಳಲ್ಲಿ ಭಾಗವಹಿಸಲು ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ ಜೆ.ಎಮ್ ಬೂದಿಹಾಳ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳು, ರೋಣ ದೂರವಾಣಿ ಸಂ:8494975408 ಮೂಲಕ ಸಂಪರ್ಕಿಸಬಹುದಾಗಿದೆ.

# ಶ್ರೀ ದುಂಡಿ ಬಸವೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವ ಸೆ.11ಕ್ಕೆ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಸಮೀಪದ ಗುಲಗಂಜಿಕೊಪ್ಪ ಗ್ರಾಮ ವ್ಯಾಪ್ತಿಯ ಶ್ರೀ ದುಂಡಿ ಬಸವೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವ ಸೆ.11ರ ಸೋಮವಾರ ನೆರವೇರಲಿದೆ.

ಜಾತ್ರಾ ಮಹೋತ್ಸವ ಅಂಗವಾಗಿ ಪ್ರಾತಃಕಾಲ ದೇವಸ್ಥಾನದಲ್ಲಿ ಗಣಪತಿಪೂಜೆ, ಶ್ರೀ ದುಂಡಿಬಸರ್ವೇರ್ಶವರನಿಗೆ ಮಹಾರುದ್ರಾಭಿಷೇಕ, ವಿಶೇಷ ಪೂಜೆ ನೆರವೇರಲಿದೆ. ಬೆಳಿಗ್ಗೆ 10ಕ್ಕೆ ಶ್ರೀಮಠದ ಆವರಣದಲ್ಲಿ ಧಾರವಾಡ ಮತ್ತು ಗದುಗಿನ ವೈದ್ಯಕೀಯ ಸಂಸ್ಥೆಗಳಿಂದ ರಕ್ತದಾನ ಶಿಬಿರ ಏರ್ಪಡಿಸಲಾಗಿದೆ.

ಮಧ್ಯಾಹ್ನ 12ಕ್ಕೆ ನೊಣವಿನಕೇರಿ ಕಾಡಸಿದ್ದೇಶ್ವರ ಮಠ ಡಾ. ಕರಿವೃಷಭದೇಶಿಕೇಂದ್ರ ಶಿವಯೋಗೀಶ್ವರ ಶ್ರೀಗಳು ಮತ್ತು ಮುಕ್ತಿಮಂದಿರದ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರ ಸಾನಿಧ್ಯದಲ್ಲಿ ಧರ್ಮಸಭೆ ನೆರವೇರಲಿದೆ. ಗಂಜಿಗಟ್ಟಿಯ ಶ್ರೀ ವೈಜನಾಥ ಶಿವಲಿಂಗೇಶ್ವರ ಶಿವಾಚಾರ್ಯರು, ಲಕ್ಷ್ಮೇಶ್ವರದ ಮಳೇಮಲ್ಲಿಕಾರ್ಜುನ ಸ್ವಾಮಿಗಳು, ಹೂವಿನಶಿಗ್ಲಿಯ ಶ್ರೀ ಚನ್ನವೀರ ಮಹಾಸ್ವಾಮಿಗಳು ಸೇರಿ ಹರಗುರುಚರ ಮೂರ್ತಿಗಳು ಉಪಸ್ಥಿತರಿರುವರು.

ದೇವಸ್ಥಾನ ಸೇವಾ ಸಮಿತಿ ಅಧ್ಯಕ್ಷ ಬಸವರಾಜ ಕೊಟಗಿ ಅಧ್ಯಕ್ಷತೆ ವಹಿಸುವರು. ಶಾಸಕ ಡಾ. ಚಂದ್ರು ಲಮಾಣಿ, ಮಾಜಿ ಸಂಸದ ಮಂಜುನಾಥ ಕುನ್ನೂರ, ಮಾಜಿ ಶಾಸಕರಾದ ಜಿ.ಎಂ ಮಹಾಂತಶೆಟ್ಟರ, ಜಿ.ಎಸ್ ಗಡ್ಡದೇವರಮಠ. ರಾಮಣ್ಣ ಲಮಾಣಿ, ರಾಮಕೃಷ್ಣ ದೊಡ್ಡಮನಿ, ವಿಜಯಕುಮಾರ ಗಡ್ಡಿ, ಷಣ್ಮುಕಪ್ಪ ಬಡ್ನಿ, ಸುಜಾತಾ ದೊಡ್ಡಮನಿ, ಮಂಜನಗೌಡ ಕೆಂಚನಗೌಡ್ರ, ನಿರ್ಮಲಾ ತಳವಾರ, ಕರಿಯಪ್ಪಗೌಡ ಹೊಸಗೌಡ್ರ, ಪದ್ಮರಾಜ ಪಾಟೀಲ, ಸುಶೀಲವ್ವ ಮರಿಲಿಂಗನಗೌಡ್ರ, ಸುಧಾ ಮಾದರ, ನಾಗರತ್ನ ಕಡಾರಿ ಸೇರಿ ಗಣ್ಯರು, ಹಿರಿಯರು ಆಗಮಿಸುವರು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ದೇವಸ್ಥಾನ ಸೇವಾ ಸಮಿತಿ ಅಧ್ಯಕ್ಷ ಬಸವರಾಜ ಕೊಟಗಿ ತಿಳಿಸಿದ್ದಾರೆ.

### ಆಕಾಶದೆತ್ತರಕ್ಕೆ ಸಾಧನೆಗೈದ ಸಮರ್ಥ ನಾಯಕ ಬಿ ಡಿ ಜತ್ತಿ ಜನ್ಮದಿನದ ನಿಮಿತ್ತ ಲೇಖನ

# ಹಳ್ಳಿಯಿಂದ ದಿಲ್ಲಿಯವರೆ ಬೆಳೆದುನಿಂತ ಸಾಧಕ

ಜಮಖಂಡಿ ಸಂಸ್ಥಾನದ ಸಣ್ಣ ಹಳ್ಳಿಯಲ್ಲಿ ಜನಿಸಿ ದೇಶದ ಅತ್ಯುನ್ನತ ಪದವಿಯವರೆಗೂ ತಲುಪಿದ ಸಾಧಕರಾಗಿ ಬಿ.ಡಿ ಜತ್ತಿಯವರು ಗುರುತಿಸಿಕೊಂಡಿದ್ದಾರೆ. 31-8-1979ರಂದು ರಾಜಕಾರಣದಿಂದ ನಿವೃತ್ತಿ ಘೋಷಿಸಿ ಬೆಂಗಳೂರಿನಲ್ಲಿ ನೆಲೆಸಿದರು. ಪ್ರಾರಂಭದಿಂದಲೂ ಶರಣರ ತತ್ವಗಳಲ್ಲಿ ಆಸಕ್ತಿ ಹೊಂದಿದ್ದರಿಂದ ಸಾಹಿತ್ಯಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ, ರಚನಾತ್ಮಕ ಕಾರ್ಯಗಳಲ್ಲಿ ತೊಡಗಿ, ದೇಶ ವಿದೇಶಗಳಲ್ಲಿ ಬಸವ ತತ್ವಗಳನ್ನು ಪಸರಿಸುವಲ್ಲಿ ಯಶಸ್ವಿಯಾದರು. 7-6-2002ರಂದು ಬಸವಣ್ಣನ ಪಾದಗಳಲ್ಲಿ ಐಕ್ಯರಾದರು.

ಬಿ.ಡಿ ಜತ್ತಿ ಅಷ್ಟೇನೂ ಆಡಂಬರ ಎನಿಸದ, ಸರಳ ಸಜ್ಜನ, ಬಸವಣ್ಣವರ ಆದರ್ಶಗಳನ್ನು ಮೈಗೂಡಿಸಿಕೊಂಡು ವಿಶಿಷ್ಟ ವ್ಯಕ್ತಿತ್ವ ಹೊಂದಿದ ಭಾರತದ ಉತ್ತಮ ಸಂಸದೀಯ ಪಟುವಾಗಿ ಗುರುತಿಸಿಕೊಂಡವರು. ಅಲ್ಲದೆ ಕರ್ನಾಟಕವನ್ನು ರಾಷ್ಟ್ರ ಮಟ್ಟದಲ್ಲಿ ಸಮರ್ಥ ನಾಯಕತ್ವದಿಂದ ಕೂಡಿದ ರಾಜ್ಯ ಎಂದು ತೋರಿಸಿಕೊಟ್ಟವರು.

ಖಾದಿಯ ನಿಲುವಂಗಿ, ಧೋತಿ, ಗಾಂಧಿ ಟೋಪಿ ಹಣೆಯಲ್ಲಿ ಮೂರು ಬೆರಳು ವಿಭೂತಿ. ಹಳ್ಳಿಯಿಂದ ದಿಲ್ಲಿಯವರೆಗೆ ಅದೆಷ್ಟೇ ಎತ್ತರಕ್ಕೆ ಬೆಳೆದರೂ ಕೊಂಚವೂ ಗರ್ವ ಪಡದ, ಸಂಸ್ಕಾರವನ್ನು ಮರೆಯದ ಸಭ್ಯಸ್ಥ ವ್ಯಕ್ತಿ ಆಗಿದ್ದರು.

ತಂದೆ ದಾನಪ್ಪ, ತಾಯಿ ಭಾಗ್ಯವ್ವ ದಂಪತಿಗಳ ಎರಡನೇ ಮಗನಾಗಿ ಸೆಪ್ಟೆಂಬರ್ 10, 1912ರಲ್ಲಿ ಅಂದಿನ ಜಮಖಂಡಿ ಸಂಸ್ಥಾನದ ಸಾವಳಗಿಯಲ್ಲಿ ಲಿಂಗಾಯತ ಬಣಜಿಗ ಕುಟುಂಬದಲ್ಲಿ ಜನಿಸಿದರು. ಬಡತನದ ಕಾರಣದಿಂದ ಶಿಕ್ಷಣ ವಂಚಿತರಾಗಿ ಓದು ಅರ್ಧಕ್ಕೆ ನಿಲ್ಲಿಸಿದ್ದರು. ತಂದೆ ದಾನಪ್ಪ ಅವರು ಬಸಪ್ಪರಿಗೆ ನಾಲ್ಕನೇ ತರಗತಿಯಲ್ಲಿ ಇರುವಾಗಲೇ ಬಿಜಾಪುರ ಮೂಲದ ಸಂಗಮ್ಮ ಅವರೊಂದಿಗೆ ವಿವಾಹ ಮಾಡಿದರು. ಆಗ ಬಾಲ್ಯ ವಿವಾಹ ರೂಢಿಯಲ್ಲಿತ್ತು. ಸಾವಳಗಿಯಲ್ಲಿ ಪ್ರಾಥಮಿಕ ಶಿಕ್ಷಣ 5ನೇ ತರಗತಿವರೆಗೆ ಮುಗಿಸಿ ಮುಂದಿನ ವಿದ್ಯಾಭ್ಯಾಸಕ್ಕೆ ಬಿಜಾಪುರಕ್ಕೆ ತೆರಳಿ, ಅಲ್ಲಿಯ ಶ್ರೀ ಸಿದ್ದೇಶ್ವರ ಹೈಸ್ಕೂಲ್‌ನಲ್ಲಿ ಮೆಟ್ರಿಕ್ ಮುಗಿಸಿದರು.

ಮೆಟ್ರಿಕ್ ನಂತರದ ಮುಂದಿನ ಶಿಕ್ಷಣಕ್ಕೆ ಕೊಲ್ಲಾಪುರಕ್ಕೆ ತೆರಳಿ ಅಲ್ಲಿನ ರಾಜಾರಾಮ ಕಾಲೇಜಿನಲ್ಲಿ ಬಿ ಎ ಪದವಿ ಉತ್ತೀರ್ಣಗೊಂಡರು. ನಂತರ ಎಂ.ಎ ಮತ್ತು ಎಲ್‌ಎಲ್‌ಬಿ ವ್ಯಾಸಂಗಕ್ಕೆ ಮುಂದಾದರು. 1936ರಲ್ಲಿ ಅವರ ತಂದೆ ಲಿಂಗೈಕ್ಯರಾದರು. ಸಂಪೂರ್ಣ ಮನೆಯ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾದ ಕಾರಣದಿಂದ ಓದು ಅರ್ಧಕ್ಕೆ ನಿಂತಿತು.

ತಮ್ಮಂದಿರು ದೊಡ್ಡವರಾಗಿ ಓದು ನಿಲ್ಲಿಸಿದಾಗ ಒಬ್ಬರಿಗೆ ಅಂಗಡಿಯನ್ನು ಮತ್ತೊಬ್ಬರಿಗೆ ಕೃಷಿಯ ಜವಾಬ್ದಾರಿಯನ್ನು ಒಪ್ಪಿಸಿ, ತಂದೆಯ



ಇಚ್ಛೆಯಂತೆ ವಕೀಲರಾಗಲು ಬಯಸಿ ಕೊಲ್ಲಾಪೂರಕ್ಕೆ ತೆರಳಿ 1940 ಎಲ್‌ಎಲ್‌ಬಿ ಪಾಸಾಗಿ ಮರಳಿ ತಾಯಿಯ ಇಚ್ಛೆಯಂತೆ ಜಮುಖಂಡಿಯಲ್ಲಿ ವಕೀಲಿ ವೃತ್ತಿ ಪ್ರಾರಂಭಿಸಿದರು. 1942 ರಲ್ಲಿ ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿ ಅಂದಿನ ಕಾಂಗ್ರೆಸ್ ನಾಯಕರ ಸಂಪರ್ಕ ಬೆಳೆಸಿಕೊಂಡಿದ್ದರು. ನಂತರದಲ್ಲಿ ಪ್ರಜಾ ಪರಿಷತ್ತು ರಚನೆಯ ಸಂದರ್ಭದಲ್ಲಿ ಸಾಬಡೆ ಅವರು ಜತ್ತಿಯವರನ್ನು ಹೆಸರನ್ನು ಸೂಚಿಸಿದರು. 1945ರಂದು ಜಮಖಂಡಿ ಸಂಸ್ಥಾನದಲ್ಲಿ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. 1948ರಲ್ಲಿ ಜಮಖಂಡಿ ಸಂಸ್ಥಾನ ಭಾರತ ಒಕ್ಕೂಟಕ್ಕೆ ವಿಲೀನವಾಯಿತು.

1949ರಲ್ಲಿ ವಿಧಾನಸಭೆ ಸದಸ್ಯರೂ ಆಗಿ, ಹಲವಾರು ರಾಜ್ಯ ನಾಯಕರೊಂದಿಗೆ ಕೆಲಸ ಮಾಡಿದರು. ನಂತರದಲ್ಲಿ, ಕೇಂದ್ರದ ಸೂಚನೆಯಂತೆ ಜತ್ತಿ ಅವರು ರಾಜ್ಯದ ಮುಖ್ಯಮಂತ್ರಿಗಳಾದರು. 1967ರ ಸಾರ್ವತ್ರಿಕ ಚುನಾವಣೆಯಲ್ಲಿ ಪುನಃ ಜಮಖಂಡಿ ಕ್ಷೇತ್ರದಿಂದ ಆಯ್ಕೆಯಾದ ಜತ್ತಿಯವರು ಎಸ್. ನಿಜಲಿಂಗಪ್ಪ ಸಂಪುಟದಲ್ಲಿ ಆಹಾರ ಮಂತ್ರಿಗಳಾದರು. 1974ರಲ್ಲಿ ದೇಶದ ಉಪರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಂಡರು.

ರಾಷ್ಟ್ರಪತಿಗಳ ಗೈರು ಹಾಜರಿಯಲ್ಲಿ ಸಂವಿಧಾನದ ಆಶಯಗಳನ್ನು ಕಾಪಾಡುವುದು, ದಿಲ್ಲಿ ಪಂಜಾಬ್ ಸೇರಿದಂತೆ ವಿಶ್ವ ವಿದ್ಯಾಲಯಗಳ ಕುಲಪತಿಯಾಗಿ ಆಡಳಿತ ನೋಡಿಕೊಳ್ಳುವುದು, ಅವಶ್ಯಕತೆಗೆ ಸಂಬಂಧಿಸಿದಂತೆ ದೇಶ ವಿದೇಶಗಳ ಸಂಬಂಧಗಳನ್ನು ಸೌಹಾರ್ದಯುತವಾಗಿ ಬೆಳೆಸುವುದು ಸೇರಿದಂತೆ ತಮ್ಮ ಹುದ್ದೆಯನ್ನು ಸಮರ್ಥವಾಗಿ ನಿಭಾಯಿಸಿದರು.

11-2-1977ರಲ್ಲಿ ಅಂದಿನ ರಾಷ್ಟ್ರಪತಿಯಾಗಿದ್ದ ಫಕ್ರುದ್ದೀನ್ ಅಲಿ ಅಹ್ಮದ್ ಅವರು ಆಕಸ್ಮಿಕವಾಗಿ ಹೃದಯಾಘಾತದಿಂದ ನಿಧನರಾದರು. ಅವರ ಉತ್ತರಾಧಿಕಾರಿಯಾಗಿ ಹಂಗಾಮಿ ರಾಷ್ಟ್ರಪತಿಗಳಾಗಿ ಬಿ.ಡಿ ಜತ್ತಿ ಅವರು ಅಧಿಕಾರ ವಹಿಸಿಕೊಂಡರು. ಆಗ ದೇಶದಲ್ಲಿ ತುರ್ತು ಪರಿಸ್ಥಿತಿ ಜಾರಿಯಲ್ಲಿತ್ತು. ನಂತರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸೇತರ ಮೊದಲ ಪ್ರಧಾನಿಯಾಗಿ ಅಭ್ಯರ್ಥಿಯಾಗಿ ಮೊರಾರ್ಜಿ ದೇಸಾಯಿ ಅವರು ಆಯ್ಕೆಯಾದರು. ಬಿ.ಡಿ ಜತ್ತಿಯವರು 26-3-1977ರಂದು ಪ್ರಮಾಣ ವಚನ ಬೋಧಿಸಿದರು. ಮೊರಾರ್ಜಿ ದೇಸಾಯಿ ಅವರು ಪ್ರಧಾನ ಮಂತ್ರಿಯಾದರು. ಮುಂದೆ 25-7-1977ರಂದು ರಾಷ್ಟ್ರಪತಿಯಾಗಿ ನೀಲಂ ಸಂಜೀವ ರೆಡ್ಡಿ ಅವರು ಆಯ್ಕೆಯಾದರು. ಬಿಡಿ ಜತ್ತಿ ಉಪರಾಷ್ಟ್ರಪತಿಯಾಗಿ ಮುಂದುವರೆದರು.

**- ಪ್ರವೀಣ ಸಂಗಳದಶೆಟ್ಟರ್.**

### ಶ್ರಾವಣ ಮಾಸದ ಕೊನೆಯ ಸೋಮವಾರದ ವಿಶೇಷ ವೃತಾಚರಣೆಗಳು

# ವೈಶಿಷ್ಟ್ಯಪೂರ್ಣ ವೃತಾಚರಣೆಯ ವಿಧಿ-ವಿಧಾನ

ಶ್ರಾವಣ ಮಾಸದಲ್ಲಿ ಮಕ್ಕಳಿಂದ ಹಿಡಿದು ಹಿರಿಯರವರೆಗೆ ಎಲ್ಲರೂ ಆಚರಿಸುವ ಒಂದು ಪ್ರಮುಖ ವ್ರತವೆಂದರೆ 'ಶ್ರಾವಣ ಸೋಮವಾರ'ದ ವ್ರತಾಚರಣೆ. ಶ್ರಾವಣ ಸೋಮವಾರದ ವ್ರತಾಚರಣೆಗೆ ಸಂಬಂಧಿಸಿದ ಆರಾಧ್ಯ ದೇವರು 'ಶಿವ'.

ಶ್ರಾವಣ ಮಾಸದ ಪ್ರತಿ ಸೋಮವಾರದಂದು, ಶಿವನ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಲಾಗುತ್ತದೆ. ಕೆಲವು ಶಿವ ಭಕ್ತರು ಶ್ರಾವಣದ ಪ್ರತಿ ಸೋಮವಾರ ಶಿವಲಿಂಗಕ್ಕೆ 108 ಅಥವಾ ವಿಶಿಷ್ಟ ಸಂಖ್ಯೆಯಲ್ಲಿ ಬಿಲ್ವಪತ್ರೆಗಳನ್ನು ಅರ್ಪಿಸುತ್ತಾರೆ. ಶಿವನಿಗೆ ಸಂಬಂಧಿಸಿದ ಕಥೆಗಳನ್ನು ಕೇಳುವುದು, ಭಜನೆ-ಕೀರ್ತನೆ, ಶಿವನಿಗೆ ಸಂಬಂಧಿಸಿದ ಸ್ತೋತ್ರಗಳನ್ನು ಪಠಿಸುವುದರೊಂದಿಗೆ ಶಿವನ ಆರಾಧನೆಯನ್ನು ಮಾಡುತ್ತಾರೆ.

ಈ ದಿನ ಸಾಧ್ಯವಾದರೆ, 'ನಿರಾಹಾರ' ಉಪವಾಸವನ್ನು ಮಾಡಿ. ನಿರಾಹಾರ ಉಪವಾಸ ಎಂದರೆ ದಿನವಿಡೀ ಅಗತ್ಯವಿದ್ದರೆ ಕೇವಲ ನೀರಿನ ಪ್ರಾಶನ ಮಾಡುವುದರ ಮೂಲಕ ಮಾಡುವ ಉಪವಾಸ. ಎರಡನೇ ದಿನ ಆಹಾರ ಸೇವಿಸುವ ಮೂಲಕ ಈ ಉಪವಾಸವನ್ನು ಮುಗಿಸುತ್ತಾರೆ. ಕೆಲವರು 'ನಕ್ತ' ಉಪವಾಸ ಆಚರಿಸುತ್ತಾರೆ. ನಕ್ತಕಾಲ ಅಂದರೆ ಸೂರ್ಯಾಸ್ತದ ನಂತರದ ಮೂರು ಘಟಿಕೆಗಳು ಅಂದರೆ 72 ನಿಮಿಷಗಳು, ಅಥವಾ ನಕ್ಷತ್ರ ಗೋಚರಿಸುವವರೆಗಿನ ಕಾಲ. ನಕ್ತ ಉಪವಾಸ ಮಾಡುವವರು ಈ ಸಮಯದಲ್ಲಿ ಮಾತ್ರ ಆಹಾರವನ್ನು ಸೇವಿಸಿ ದಿನವಿಡೀ ಉಪವಾಸವನ್ನು ಮಾಡುತ್ತಾರೆ. ಕೆಲವು ಸ್ಥಳಗಳಲ್ಲಿ ಶಿವ ಭಕ್ತರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಯಾವುದೇ ಒಂದು ಸೋಮವಾರ ಅಥವಾ ತಿಂಗಳ ಪ್ರತಿ ಸೋಮವಾರ ಕಾನ್ವರ್ ಯಾತ್ರೆಯನ್ನು ಮಾಡುತ್ತಾರೆ. ಕಾನ್ವರ್ ಎಂದರೆ ನೀರನ್ನು ಹೊರುವವನು. ಈ ಯಾತ್ರೆಯಲ್ಲಿ ಶಿವಭಕ್ತರು ಪವಿತ್ರ ನದಿಯ ನೀರನ್ನು ತೆಗೆದುಕೊಂಡು ಶಿವನಿಗೆ ಸಂಬಂಧಿಸಿದ ಹತ್ತಿರದ ತೀರ್ಥಕ್ಷೇತ್ರ-ಕ್ಕೆ ಹೋಗಿ ಶಿವಲಿಂಗಕ್ಕೆ ಜಲಾಭಿಷೇಕ ಮಾಡುತ್ತಾರೆ. ಈ ಯಾತ್ರೆಯನ್ನು ಬರಿಗಾಲಿನಲ್ಲಿ ಮಾಡಲಾಗುತ್ತದೆ.



ಶ್ರಾವಣ ಮಾಸದ ಪ್ರತಿ ಸೋಮವಾರ, ಶಿವನ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿ, ಸಾಧ್ಯವಾದರೆ ನಿರಾಹಾರ ಉಪವಾಸ ಅಥವಾ ನಕ್ತ ಉಪವಾಸ ಮಾಡಬೇಕು. ಯಾವುದೇ ಕಾರಣದಿಂದ ಶಿವನ ದೇವಾಲಯಕ್ಕೆ ಅಥವಾ ತೀರ್ಥಕ್ಷೇತ್ರಕ್ಕೆ ಹೋಗಲು ಆಗದಿದ್ದರೆ, ಪರ್ಯಾಯವನ್ನು ಅನುಸರಿಸಬಹುದು.

ನಮ್ಮ ದೇಶ ಮತ್ತು ಅದರ ಸಂಸ್ಕೃತಿಗಳು ವೈವಿಧ್ಯಮಯವಾಗಿರುವುದರಿಂದ, ಆಚರಣೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತವೆ. ಆದಾಗ್ಯೂ, ಇವು ಶ್ರಾವಣ ಮಾಸದಲ್ಲಿ ವ್ಯಾಪಕವಾಗಿ ಅನುಸರಿಸುವ ಆಚರಣೆಗಳಾಗಿವೆ. ಶ್ರಾವಣ ಮಾಸವನ್ನು ಅತ್ಯಂತ ಪ್ರಯೋಜನಕಾರಿ ರೀತಿಯಲ್ಲಿ ಆಚರಿಸಲು, ಈ ಆಚರಣೆಗಳನ್ನು ಅನುಸರಿಸಲಾಗುತ್ತದೆ. ಭಕ್ತರು ಎದ್ದು ಸ್ನಾನ ಮಾಡಿ ಶುಭ್ರವಾದ ಬಟ್ಟೆಯನ್ನು ಧರಿಸುತ್ತಾರೆ. ನಂತರ ಶಿವ ಮತ್ತು ಪಾರ್ವತಿ ದೇವಿಯ ವಿಗ್ರಹಗಳಿಗೆ ಪೂಜೆ ಸಲ್ಲಿಸುತ್ತಾರೆ. ಶಿವನ ದೇವಾಲಯಗಳಿಗೂ ಭೇಟಿ ನೀಡಿ ದೇಣಿಗೆ ನೀಡುತ್ತಾರೆ. ಜನರು ಶಿವನಿಗೆ ಸಮರ್ಪಿತವಾದ ಮಂತ್ರಗಳು ಮತ್ತು ಸ್ತೋತ್ರಗಳನ್ನು ಸಹ ಪಠಿಸುತ್ತಾರೆ.

ಶ್ರಾವಣ ಮಾಸದ ಪ್ರಮುಖ ಆಚರಣೆಗಳಲ್ಲಿ ಉಪವಾಸವೂ ಒಂದು. ಜನರು ದೇವರ ಮೇಲಿನ ಪ್ರೀತಿ ಮತ್ತು ಭಕ್ತಿಯನ್ನು ತೋರಿಸಲು ಉಪವಾಸ ಮಾಡುತ್ತಾರೆ. ಈ ತಿಂಗಳಲ್ಲಿ ಜನರು ಅನುಸರಿಸುವ ಹಲವು ವಿಭಿನ್ನ ಉಪವಾಸಗಳಿವೆ. ಶ್ರಾವಣ ಸೋಮವಾರ ವ್ರತ, ಸೋಲಾ ಸೋಮವಾರ ವ್ರತ, ಮಂಗಳ ಗೌರಿ ವ್ರತ, ಪ್ರದೋಷ ವ್ರತ, ಶನಿ ವ್ರತ ಇತ್ಯಾದಿಗಳು ಈ ಮಾಸದಲ್ಲಾಚರಿಸುವ ಪ್ರಮುಖ ವ್ರತಗಳು. ತಮ್ಮ ತಮ್ಮ ಕ್ಷಮತೆಗನುಸಾರ ತಿಳಿದಿರುವ ವೈದಿಕ ಅಥವಾ ಲೌಕಿಕ ಮಂತ್ರಗಳ ಮೂಲಕ ಶಿವನನ್ನು ಪೂಜಿಸಲಾಗುತ್ತದೆ. ಸಮಸ್ತ ಭಕ್ತವೃಂದದವರಿಗೆ ಶ್ರಾವಣ ಮಾಸದ ಕೊನೆಯ ಸೋಮವಾರದ ವೃತಾಚರಣೆಯ ಫಲಶ್ರುತಿ ದೊರಕುವಂತಾಗಲಿ.



**- ಸಹನಾ ರಾಘವೇಂದ್ರ ಪಾಲನಕರ.**
ಅಧ್ಯಕ್ಷರು, ಸೌಜನ್ಯತಾ ಸಮಗ್ರ ನಾಗರಿಕ ಹಿತರಕ್ಷಣಾ ಸಮಿತಿ, ಗದಗ.

# ಅಪ್ರಾಪ್ತ ಗ್ರಾಹಕರೇ ಅಧಿಕವಾಗಿದ್ದ ಪಬ್‌ಗಳ ಮೇಲೆ ಸಿಸಿಬಿ ದಾಳಿ

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಸಿಲಿಕಾನ್ ಸಿಟಿಯ ಪಬ್, ಬಾರ್ ಆ್ಯಂಡ್ ರೆಸ್ಟೋರೆಂಟ್ ಮತ್ತು ಹುಕ್ಕಾ ಬಾರ್‌ಗಳ ಮೇಲೆ ತಡರಾತ್ರಿ ಸಿಸಿಬಿ ಅಧಿಕಾರಿಗಳು ಏಕಕಾಲಕ್ಕೆ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ. ಕೋರಮಂಗಲ, ಇಂದಿರಾನಗರ, ಹೆಚ್‌ಎಸ್‌ಆರ್ ಲೇಔಟ್, ಬಾಣಸವಾಡಿ, ಹೆಣ್ಣೂರು ಸೇರಿದಂತೆ ನಗರದ ಹಲವು ಕಡೆ ದಾಳಿ ನಡೆಸಲಾಗಿದೆ.

ದಾಳಿ ವೇಳೆ ಸುಮಾರು ಕಡೆಗಳಲ್ಲಿ ಸಿಗರೇಟ್ ಮತ್ತು ಇತರೆ ತಂಬಾಕು ಉತ್ಪನ್ನಗಳ ಕಾಯ್ದೆ, ಬಾಲ ನ್ಯಾಯ ಕಾಯ್ದೆ, ಅಬಕಾರಿ ನಿಯಮಗಳನ್ನು ಉಲ್ಲಂಘಿಸಲಾಗಿದೆ.

# ವರವಿ ಶ್ರೀ ಜ.ಮೌನೇಶ್ವರರ ಜಾತ್ರಾ ಮಹೋತ್ಸವ

**■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಪವಾಡಪುರುಷ ವರವಿಯ ಶ್ರೀ ಜ.ಮೌನೇಶ್ವರರ ಜಾತ್ರಾ ಮಹೋತ್ಸವವು ಸೆ.9, ಸೋಮವಾರ ಪ್ರಾರಂಭವಾಗಲಿದೆ. ಅಂದು ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಮೌನೇಶ್ವರರಿಗೆ ಅಭಿಷೇಕ, ಅರ್ಚನೆ, ಅಲಂಕಾರದೊಂದಿಗೆ ಚಿನ್ನದ ಮುಖವಾಡದಿಂದ ಅಲಂಕರಿಸಲಾಗುತ್ತದೆ.

ಈ ಸಂದರ್ಭದಲ್ಲಿ ವಿಶ್ವಕರ್ಮ ಮಠಾಧಿಪತಿಗಳು ಹಾಗೂ ಪೀಠಾಧಿಪತಿಗಳು ಶ್ರೀ ಶಿವಲಿಂಗೇಶ್ವರ ಸ್ವಾಮೀಜಿ, ಮೌನೇಶ್ವರ ಸ್ವಾಮೀಜಿ(ವರವಿ), ಶಿರಹಟ್ಟಿಯ ಜ.ಫ ದಿಂಗಾಲೇಶ್ವರ ಸ್ವಾಮೀಜಿ, ಅಣ್ಣಿಗೇರಿಯ ಶಿವಕುಮಾರ ಸ್ವಾಮೀಜಿ, ಚಿಕ್ಕಂಬಿಯ ನಾಗಲಿಂಗ ಸ್ವಾಮೀಜಿ ಶ್ರೀಗಳನ್ನು ಪೂರ್ಣಕುಂಭ ಮೇಳಗಳೊಂದಿಗೆ ದೇವಸ್ಥಾನಕ್ಕೆ ಬರಮಾಡಿಕೊಳ್ಳುವ ಕಾರ್ಯಕ್ರಮ, ಸಂಜೆ 5ಗಂಟೆಗೆ ರಥೋತ್ಸವ ನಡೆಯಲಿದೆ.



ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ, ಶಾಸಕ ಡಾ. ಚಂದ್ರು ಲಮಾಣಿ, ತಹಸೀಲ್ದಾರ ಅನಿಲ ಬಡಿಗೇರ, ಸಿಪಿಐ ನಾಗರಾಜ ಮಾಢಳ್ಳಿ, ಪಿಎಸ್‌ಐ ಈರಣ್ಣ ರಿತ್ತಿ, ತಾಲೂಕಿನ ಮುಖಂಡರು, ಪಂಚಾಯಿತಿ ಸದಸ್ಯರು ಉಪಸ್ಥಿತರಿರುವರು. ಸೆ.12ರಂದು ಕಡುಬಿನ ಕಾಳಗ, ಸೆ.13ರಂದು ಶ್ರೀ ಮೌನೇಶ್ವರರ ಪಲ್ಲಕ್ಕಿ ಛಬ್ಬಿ ಗ್ರಾಮಕ್ಕೆ ಹೋಗಿ ಬರುವುದು, ಸೆ.14ರಂದು ಶ್ರೀ ಮೌನೇಶ್ವರರ ಪಲ್ಲಕ್ಕಿ ಅಲಾವಿ ಗುಡ್ಡಕ್ಕೆ ಹೋಗಿ ಬರುವುದು ಹಾಗೂ ಪುರವಂತರ ಸೇವೆ, ಸೆ.15ರಂದು ಜಾತ್ರಾ ಮಹೋತ್ಸವದ ಸಮಾರೋಪ ಸಮಾರಂಭ ಹಾಗೂ ದಾನಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ. ಭಕ್ತರು ಆಗಮಿಸಿ, ಜಾತ್ರಾ ಮಹೋತ್ಸವದ ಎಲ್ಲ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕೆಂದು ದೇವಸ್ಥಾನ ಹಾಗೂ ಮಠದ ವಿಕಾಸ್ ಟ್ರಸ್ಟ್ ಕಮಿಟಿ ಅಧ್ಯಕ್ಷ ಸೋಮನಾಥ ಕುಂದನಗಾರ ಮತ್ತು ಪದಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ತಾಲೂಕಾ ಮಟ್ಟದ ಚೆಸ್ ಸ್ಪರ್ಧೆಗೆ ಚಾಲನೆ ನೀಡಿದ ಆರ್.ವಿ ವೆರ್ಣೇಕರ

# ಮಾನಸಿಕ ಸಾಮರ್ಥ್ಯ ವೃದ್ಧಿಗೆ ಚೆಸ್ ಸಹಕಾರಿ



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಚದುರಂಗ(ಚೆಸ್)ದ ಆಟ ವಿದ್ಯಾರ್ಥಿಗಳಲ್ಲಿ ಶ್ರದ್ಧೆ, ಏಕಾಗ್ರತೆ, ಗೆಲ್ಲುವ ಮನೋಭಾವ ಮೂಡಿಸುವುದರೊಂದಿಗೆ ಜ್ಞಾಪಕ ಶಕ್ತಿ ವೃದ್ಧಿಗೆ, ಮಕ್ಕಳ ಮಾನಸಿಕ ಬೆಳವಣಿಗೆಗೆ ಪೂರಕವಾಗಿದೆ ಎಂದು ಜಿಲ್ಲಾ ಚೆಸ್ ಅಸೋಸಿಯೇಷನ್ ಅಧ್ಯಕ್ಷ ಆರ್.ವಿ ವೆರ್ಣೇಕರ ಹೇಳಿದರು.

ಅವರು ಗುರುವಾರ ಗೊಜನೂರಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ತಾಲೂಕಾ ಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಬಾಲಕ ಮತ್ತು ಬಾಲಕಿಯರ ಚೆಸ್ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿ, ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆ, ಮಾನಸಿಕ ಸಾಮರ್ಥ್ಯ ವೃದ್ಧಿಗೆ ಶಾಲಾ ಹಂತದಲ್ಲಿ ಚೆಸ್ ಕ್ರೀಡೆಗೆ ವೇದಿಕೆಗಳು ಸಿದ್ಧಗೊಳ್ಳಬೇಕು. ರಾಜ-ಮಹಾರಾಜರ ಕಾಲದಿಂದಲೂ ಬಹು ಬೇಡಿಕೆಯ ಈ ಆಟ ಮೊಬೈಲ್, ಕಂಪ್ಯೂಟರ್, ಟಿವಿ ಮಾಧ್ಯಮಗಳ ಪ್ರಭಾವದಿಂದ ನಶಿಸುತ್ತಿರುವುದು ವಿಷಾದನೀಯ. ವಿದ್ಯಾರ್ಥಿಗಳು ಈ ಆಟವನ್ನು ಪಠ್ಯಶಿಕ್ಷಣದ ಒಂದು ಭಾಗವಾಗಿ ರೂಢಿಸಿಕೊಳ್ಳಬೇಕೆಂದರು.

## ಜಿಲ್ಲಾ ಮಟ್ಟಕ್ಕೆ ಆಯ್ಕೆ


ಪ್ರಾಥಮಿಕ ಶಾಲೆಯ ಬಾಲಕಿಯರ ವಿಭಾಗದಲ್ಲಿ ಲಕ್ಷ್ಮೇಶ್ವರದ ಆಕ್ಸ್‌ಫರ್ಡ್ ಶಾಲೆಯ ಸಿಂಚನಾ ಕಟ್ಟೆಣ್ಣವರ, ಲಿಟಲ್ ಹಾರ್ಟ್ ಶಾಲೆಯ ಸುಬೀಕ್ಷಾ ಜಿಗಳಿ, ಶಿರಹಟ್ಟಿಯ ಎಸ್‌ಎಫ್‌ಸಿ ಸ್ಕೂಲ್‌ನ ಶ್ರೀನಿಧಿ ಚೌಕಿಮಠ, ಗೊಜನೂರ ಮುರಾರ್ಜಿ ಶಾಲೆಯ ಗೌತಮಿ ಸುಲ್ತಾನಪುರ, ನಾಗರಮಡವಿನ ಜಿಎಸ್‌ಪಿಎಸ್‌ನ ಭವಾನಿ ಆನೆಪ್ಪನವರ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದರೆ, ಬಾಲಕರ ವಿಭಾಗದಲ್ಲಿ ಲಕ್ಷ್ಮೇಶ್ವರದ ದಿ ಯೂನಿಕ್ ಶಾಲೆಯ ಸಮೀರ್ ಮುಲ್ಲಾ, ಕುಂದ್ರಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರದೀಪ ಅಂಗಡಿ, ನಾಗರಮಡವಿನ ರವಿ ಕುರಿ ಮತ್ತು ಶರಣಪ್ಪ ಉಳ್ಳಟ್ಟಿ, ಶಿರಹಟ್ಟಿ ಸಿಸಿಎನ್ ಶಾಲೆಯ ಶಿವಪ್ರಸಾದ ಚೌಕಿಮಠ ಆಯ್ಕೆಯಾದರು.

ಪ್ರೌಢಶಾಲೆಯ ಬಾಲಕರ ವಿಭಾಗದಲ್ಲಿ: ಲಕ್ಷ್ಮೇಶ್ವರ ಲಿಟಲ್ ಹಾರ್ಟ್ಸ್ ಶಾಲೆಯ ದಯಾನಂದ ಕುರ್ತಕೋಟಿ, ಮಾಹಾಂತೇಶ ಗಂಗಾಮಠ, ಒಡೆಯರಮಲ್ಲಾಪುರ ಮೊರಾರ್ಜಿ ಶಾಲೆಯ ಮಂಜುನಾಥ ಲಮಾಣಿ, ಗೊಜನೂರ ಮೊರಾರ್ಜಿಯ ಚೇತನ ಕೋಣನತಂಬಗಿ, ದಿ ಯೂನಿಕ್ ಶಾಲೆಯ ಭರತಗೌಡ ಕಾಶೆಟ್ಟಿ ಆಯ್ಕೆಯಾದರೆ, ಬಾಲಕಿರ ವಿಭಾಗದಲ್ಲಿ ಕೊಂಚಿಗೇರಿಯ ಲಕ್ಷ್ಮೀ ಬೆಳಗಟ್ಟಿ, ಲಕ್ಷ್ಮೇಶ್ವರ ಯೂನಿಕ್ ಶಾಲೆಯ ವರ್ಷಾ ಹಿರೇಮಠ, ಆಕ್ಸ್‌ಫರ್ಡ್‌ನ ಆಕಾಂಕ್ಷಾ ಪಾಟೀಲ, ಶಿಗ್ಲಿಯ ಎಸ್‌ಎಸ್‌ಕೆಯ ನಂದನಿ ಕಾಳಪ್ಪನವರ, ಗೊಜನೂರ ಮುರಾರ್ಜಿಯ ಸೌಮ್ಯ ಕುಂಬಾರ ಆಯ್ಕೆಯಾದರು.

ಬಿಇಓ ಜಿ.ಎಂ ಮುಂದಿನಮನಿ ಮಾತನಾಡಿ, ಚೆಸ್ ಆಟದಲ್ಲಿ ವಿದ್ಯಾರ್ಥಿಗಳಿಗೆ ಏಕಾಗ್ರತೆ, ಶ್ರದ್ಧೆ, ಆತ್ಮವಿಶ್ವಾಸ ಬೇಕಾಗುತ್ತದೆ. ಸೋಲು-ಗೆಲುವು ಮುಖ್ಯವಲ್ಲ, ವಿದ್ಯಾರ್ಥಿಗಳು ಭಯಬಿಟ್ಟು ಆಟದಲ್ಲಿ ಪಾಲ್ಗೊಳ್ಳಬೇಕು. ಬಿಡುವಿನ ವೇಳೆಯಲ್ಲಿ ಮನಸ್ಸನ್ನು ಒತ್ತಡ ಮುಕ್ತವಾಗಿಸಲು ಈ ಆಟ ಪೂರಕವಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಚೆಸ್ ಕ್ರೀಡೆಗೆ ಹೆಚ್ಚು ಒತ್ತು ನೀಡಿದೆ ಎಂದರು.

ಇಸಿಓ ಉಮೇಶ ಹುಚ್ಚಯ್ಯನಮಠ, ತಾಲೂಕಾ ದೈಹಿಕ ಶಿಕ್ಷಣ ಪರಿವೀಕ್ಷಕ ಎಂ.ಎನ್ ಹವಳದ, ಪ್ರಾಚಾರ್ಯ ಎನ್.ಕೆ ಹತ್ತಿಕಾಳ, ಎಂ.ಬಿ ಹೊಸಮನಿ, ಜಿಲ್ಲಾ ಚೆಸ್ ಅಸೋಸಿಯೇಷನ್ ಉಪಾಧ್ಯಕ್ಷ ಗಿರೀಶ ಅಗಡಿ, ಶ್ರೀಕಾಂತ ಪೂಜಾರ, ಎಸ್.ಸಿ ಗೋಲಪ್ಪನವರ, ಆರ್.ಎ ಮುಲ್ಲಾ, ಎಂ.ಆಯ್ ಕಣಿಕೆ, ನಾರಾಯಣ ಹೊಸೂರ, ಕೆ.ಪಿ ಪಾಟೀಲ, ರಮೇಶ ಚವ್ಹಾಣ ನಿರೂಪಿಸಿದರು. ಚೆಸ್ ಸ್ಪರ್ಧೆಯಲ್ಲಿ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಜಾವೆಲಿನ್ ಎಸೆತದಲ್ಲಿ ಜಿಲ್ಲಾಮಟ್ಟಕ್ಕೆ ಆಯ್ಕೆ



**■ವಿಜಯಸಾಕ್ಷಿ ಸುದ್ದಿ, ಕೊಪ್ಪಳ**

ತಾಲೂಕಿನ ಹಿರೇಸಿಂದೋಗಿಯ ಸರಕಾರಿ ಪದವಿಪೂರ್ವ ಮಹಾ ವಿದ್ಯಾಲಯದ ಕುಮಾರಿ ಗೀತಾ ಕೋನಾಪೂರ ಜಾವಲಿನ್ ಎಸೆತದಲ್ಲಿ ತಾಲೂಕು ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದಾರೆ ಎಂದು ಮಹಾವಿದ್ಯಾಲಯದ ಪ್ರಾಚಾರ್ಯರಾದ ಹನುಮಂತಪ್ಪ ಅಂಡಗಿ ಚಿಲವಾಡಗಿ ಅವರು ತಿಳಿಸಿದ್ದಾರೆ. ಕೊಪ್ಪಳದ ಜಿಲ್ಲಾ ಕ್ರೀಡಾಂಗಣದಲ್ಲಿ ಸ್ವಾಮಿ ವಿವೇಕಾನಂದ ಪದವಿಪೂರ್ವ ಮಹಾವಿದ್ಯಾಲಯದವರು ಹಮ್ಮಿಕೊಂಡ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಜಾವಲಿನ್ ಎಸೆತದಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

**ನೀವೂ ನಮ್ಮ ಜೊತೆ ಕೈಜೋಡಿಸಿ**

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ಸರ್ಕಾರಿ ಉದ್ಯೋಗ ನಿರೀಕ್ಷಿಸದೇ ಸ್ವಯಂ ಉದ್ಯೋಗಿಗಳಾಗಿ

▶▶ ಮೊದಲನೇ ಪುಟದಿಂದ

**ಉದ್ಯೋಗ ಮೇಳಕ್ಕೆ ಉತ್ತಮ ಸ್ಪಂದನೆ**

ಉದ್ಯೋಗ ಮೇಳಕ್ಕೆ ಗದಗ ಜಿಲ್ಲೆ ಸೇರಿದಂತೆ ನೆರೆಯ ಜಿಲ್ಲೆಯ 758 ನಿರುದ್ಯೋಗಿ ವಿದ್ಯಾವಂತರು ಉದ್ಯೋಗಕ್ಕಾಗಿ ಹೆಸರು ನೋಂದಾಯಿಸಿದ್ದು, ಇವರಲ್ಲಿ 390 ಅಭ್ಯರ್ಥಿಗಳು ಉದ್ಯೋಗಕ್ಕಾಗಿ ಅರ್ಹತೆ ಪಡೆದುಕೊಂಡರು. ಹಲವು ಕಂಪನಿಗಳು 118 ಅಭ್ಯಥಿಗಳಿಗೆ ಸ್ಥಳದಲ್ಲಿಯೇ ನೇಮಕಾತಿ ಆದೇಶ ನೀಡಿದವು. ಅರ್ಹತೆ ಪಡೆದವರೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ಇನ್ನಷ್ಟು ನೇಮಕಾತಿ ಆಗುವ ಸಾಧ್ಯತೆಗಳಿವೆ.

ಗದಗ ಉತ್ಸವದ ಚೇರಮನ್ ಚಂದ್ರು ಬಾಳಿಹಳ್ಳಿಮಠ ಮಾತನಾಡಿ, ಪ್ರತಿ ವರ್ಷ ಗದಗ ಜಿಲ್ಲಾ ಚೇಂಬರ್ ಆಫ್ ಕಾಮರ್ಸ್ 'ಗದಗ ಉತ್ಸವ' ಏರ್ಪಡಿಸುತ್ತ ಬಂದಿದೆ. ಉತ್ಪಾದಕರಿಗೆ ಮಾರುಕಟ್ಟೆ ಒದಗಿಸುವದು ಒಂದೆಡೆಯಾದರೆ, ಗ್ರಾಹಕರಿಗೆ ಲಾಭದಾಯಕ ಉತ್ಪನ್ನಗಳನ್ನು ತಲುಪಿಸುವ ಉದ್ದೇಶವೂ ಆಗಿದೆ. ಈ ವರ್ಷ ರೋಟರಿ ಗದಗ ಸೆಂಟ್ರಲ್ ಕ್ಲಬ್ ಸಹಕಾರದೊಂದಿಗೆ ಉದ್ಯೋಗ ಮೇಳ ನಡೆಸಲಾಗುತ್ತಿದೆ ಎಂದರು.

ನಿರುದ್ಯೋಗಿ ವಿದ್ಯಾವಂತರಿಗೆ ಉದ್ಯೋಗಾವಕಾಶಗಳು ಲಭ್ಯವಾಗಬೇಕು. ಅದಕ್ಕೆ ಗದಗ ಉತ್ಸವವು ವೇದಿಕೆಯನ್ನು ಕಲ್ಪಿಸಿದೆ. ಕಂಪನಿಗಳು ಯೋಗ್ಯ ಅಭ್ಯರ್ಥಿಯ ಆಯ್ಕೆಗೆ ಮುಂದಾದರೆ, ಅಭ್ಯರ್ಥಿ ತನ್ನ ಮನಸ್ಸಿಗೆ ಒಪ್ಪಿಗೆಯಾಗುವ ಕಂಪನಿ, ಉದ್ಯೋಗಾವಕಾಶಕ್ಕೆ ಮುಂದಾಗಲಿ. ನೇರ ಸಂದರ್ಶನ, ನೇರ ನೇಮಕಾತಿ ಇಬ್ಬರಿಗೂ ಪರಸ್ಪರ ಹೊಂದಾಣಿಕೆಯಾದಲ್ಲಿ ನಮ್ಮ ಪ್ರಯತ್ನ ಸಾರ್ಥಕ ಎಂದರು.

ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ ಮದುಸೂಧನ ಪುಣೇಕರ, ರೋಟರಿ ಜಿಲ್ಲಾ ಸಹಾಯಕ ಗವರ್ನರ್ ಶರಣಬಸಪ್ಪ ಗುಡಿಮನಿ ಮಾತನಾಡಿ, ಈ ಉದ್ಯೋಗ ಮೇಳದಿಂದಾಗಿ ನಿರುದ್ಯೋಗಿ ವಿದ್ಯಾವಂತರ ಬದುಕು ಸುಂದರವಾಗಿ ರೂಪುಗೊಳ್ಳಲಿ, ಉದ್ಯೋಗವಂತರಾಗಿ ಉತ್ತಮ ಜೀವನ ನಡೆಸುವಂತಾಗಲಿ ಎಂದರು.

ಮಹೇಶ ಕುಂದ್ರಾಳಹಿರೇಮಠ ಪ್ರಾರ್ಥಿಸಿದರು. ರೋಟರಿ ಗದಗ ಸೆಂಟ್ರಲ್ ಅಧ್ಯಕ್ಷ ವಿಜಯಕುಮಾರ ಹಿರೇಮಠ ಸ್ವಾಗತಿಸಿದರು. ಗದಗ ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿ ಬಸವರಾಜ ಮಲ್ಲೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ವ್ಹಿ.ಕೆ ಗುರುಮಠ ನಿರೂಪಿಸಿದರು ಡಾ.ಸಂತೋಷ ತೋಟಗಂಟಿಮಠ ವಂದಿಸಿದರು. ವೇದಿಕೆಯ ಮೇಲೆ ಚಂದ್ರಶೇಖರ ಅಣ್ಣಿಗೇರಿ, ಸುನೀಲ ಕಬಾಡಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ರೋಟರಿ ಗದಗ ಸೆಂಟ್ರಲ್, ಗದಗ ಉತ್ಸವ ಹಾಗೂ ಚೇಂಬರ್ ಪದಾಧಿಕಾರಿಗಳು ಸದಸ್ಯರು ಪಾಲ್ಗೊಂಡಿದ್ದರು.

## ಮಹಿಳಾ ಕಟ್ಟಡ ನಿರ್ಮಾಣ ಕಾರ್ಮಿಕರ ರಾಜ್ಯ ಸಮಾವೇಶ ಇಂದು

**■ ವಿಜಯಸಾಕ್ಷಿ ಸುದ್ದಿ, ಗದಗ**

ಸಮಾನ ಕೂಲಿ, ಆರೋಗ್ಯ, ಸುರಕ್ಷತೆ ಹಾಗೂ ಸಾಮಾಜಿಕ ಭದ್ರತೆಗಾಗಿ ಬೆಂಗಳೂರಿನಲ್ಲಿ ಸೆ.10ರಂದು ಮಹಿಳಾ ಕಟ್ಟಡ ನಿರ್ಮಾಣ ಕಾರ್ಮಿಕರ ಪ್ರಥಮ ರಾಜ್ಯ ಮಟ್ಟದ ಸಮಾವೇಶ ನಡೆಯಲಿದೆ ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್(ರಿ) ಗದಗ ಜಿಲ್ಲಾ ಸಮಿತಿ ತಿಳಿಸಿದೆ.

ಕಾರ್ಮಿಕ ಮುಖಂಡ ಮಾರುತಿ ಚಿಟಗಿ ಮಾತನಾಡಿ, ಸಮಾವೇಶವು ಸೆ.10ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆಯಲಿದೆ. ಸಿಐಟಿಯು ಸಂಯೋಜಿತ 'ಕರ್ನಾಟಕ ರಾಜ್ಯ ಕಟ್ಟಡ & ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಸಮಾವೇಶವನ್ನು ಸಂಘಟಿಸಿದೆ. ನಿರ್ಮಾಣ ವಲಯದ ಮಹಿಳಾ ಕಾರ್ಮಿಕರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. 67% ಮಹಿಳಾ ಕಾರ್ಮಿಕರು ಕೆಲಸದ ಸ್ಥಳದಲ್ಲಿ ಆಗುವ ಅಪಘಾತಗಳಿಂದಾಗಿ ಶಾಶ್ವತವಾಗಿ ದುಡಿಮೆಯನ್ನು ತೊರೆಯುತ್ತಿದ್ದಾರೆ. ಇಂತಹ ಇನ್ನೂ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.



ಮುಳಗುಂದ ಪಟ್ಟಣದ ಬೋಗೇರಿ ಓಣಿಯ ಮಾರುತಿ ಭಜನಾ ಸಂಘದ ಬಳಗದ ವತಿಯಿಂದ ಅಜಿಜನಾದ್ರಿ ಬೆಟ್ಟಕ್ಕೆ ಪಾದಯಾತ್ರೆ ಕೈಗೊಂಡರು. ಪ್ರಸ್ತುತ ವರ್ಷದಲ್ಲಿ ಸರಿಯಾಗಿ ಮಳೆ ಯಾಗದೇ ರೈತರು, ಜೀವ ಸಂಕುಲ ತೀರಾ ಸಂಕಷ್ಟದಲ್ಲಿ ಇರುವ ಕಾರಣ, ಮಳೆ-ಬೆಳೆ ಕರುಣಿಸಲಿ ಎಂದು ಭಜನಾ ಮಂಡಳಿಯ ಹರಕೆಯಂತೆ ಪಾದಯಾತ್ರೆ ಮೂಲಕ ಅಂಜನಾದ್ರಿಯ ಆಂಜನೇಯ ಸ್ವಾಮಿ ದರ್ಶನಕ್ಕೆ ತೆರಳುತ್ತಿರುವುದಾಗಿ ಭಜನಾ ಮಂಡಳಿಯ ಅಧ್ಯಕ್ಷ ಮಾಹಾಂತೇಶ ಪತ್ರಿ ಹೇಳಿದರು.

### ಬಣ್ಣದ ಮನೆ ಸಾಂಸ್ಕೃತಿಕ ವೇದಿಕೆಯ ಸಾಹಿತ್ಯ ಕಮ್ಮಟದಲ್ಲಿ ಸುಬ್ರಹ್ಮಣ್ಯಂ ಕೆ.ವಿ

# ಸ್ಥಳೀಯ ಚಿತ್ರಕಾರರ ಕಲಾಸೇವೆ ಅಮೋಘ

**■ ವಿಜಯಸಾಕ್ಷಿ ಸುದ್ದಿ, ಗದಗ**

ಬಣ್ಣದ ಮನೆ ಸಾಂಸ್ಕೃತಿಕ ವೇದಿಕೆಯು ಚಿತ್ರಕಲೆಗೆ ಕೊಡುಗೆ ನೀಡಿದ ಕಲಾವಿದರ ಬದುಕನ್ನು ಸಂಕ್ಷಿಪ್ತವಾಗಿ ಬರೆದು ಜಗತ್ತಿಗೆ ಅನಾವರಣಗೊಳಿಸುವ ಹೊಣೆಗಾರಿಕೆಯನ್ನು ಉತ್ಸಾಹಿ ಲೇಖಕರಿಗೆ ನೀಡಿದ್ದು, ಈ ಕಾರ್ಯ ಸೂಕ್ಷ್ಮ ಕುಸುರಿ ಕೆಲಸವಿದ್ದಂತೆ ಎಂದು ಖ್ಯಾತ ವಿಮರ್ಶಕ ಕೆ.ವಿ ಸುಬ್ರಹ್ಮಣ್ಯಂ ನುಡಿದರು.

ಅವರು ಶನಿವಾರ ಬಣ್ಣದ ಮನೆ ಸಾಂಸ್ಕೃತಿಕ ವೇದಿಕೆ ವತಿಯಿಂದ ನಗರದ ಸಂಸ್ಕೃತಿ ಕನ್ವೆನ್ಷನ್ ಹಾಲ್‌ನಲ್ಲಿ ಜರುಗಿದ 'ದೃಶ್ಯಕಾರರ ಚಿತ್ರಣ ಶಬ್ದಾಕೃತಿಯಲರ್ಪಣ' ಸಾಹಿತ್ಯ ಕಲಾ ಕಮ್ಮಟ ಉದ್ಘಾಟಿಸಿ ಮಾತನಾಡಿದರು.

ಕಲಾವಿದನ ಬದುಕು ಅದರಲ್ಲೂ ಬಾಲ್ಯಜೀವನ ಆತನ ಕಲಾಪಯಣದ ಮೇಲೆ ಹೇರಳವಾದ ಪ್ರಭಾವ ಬೀರಿರುತ್ತದೆ. ಹೀಗಾಗಿ, ಬರಹಗಾರರು ಕಲಾವಿದರ ಬಾಲ್ಯದ ಮೇಲೆ ಬೆಳಕು ಚೆಲ್ಲುವ ಅವಶ್ಯಕತೆ ಇದೆ. ಕಲಾವಿದರ ಪ್ರಾದೇಶಿಕ ಚರಿತ್ರೆಯನ್ನೊಳಗೊಂಡ ಇತಿಹಾಸವನ್ನು ಬರಹದಲ್ಲಿ ಮೇಳೈಸಿಕೊಂಡು ಸೂಕ್ತ ಕೃತಿಗಳ ಅಧ್ಯಯನದೊಂದಿಗೆ ಅಕ್ಷರಕೃಷಿ ಮಾಡಿದಾಗ ಮಾತ್ರ ಅದು ಸಾರ್ಥಕವಾಗುತ್ತದೆ. ಸ್ಥಳೀಯ ಚಿತ್ರಕಾರರ ಕಲಾಸೇವೆಯೇ ಅಮೋಘವಾಗಿದ್ದು, ಅವರನ್ನು ಮುನ್ನೆಲೆಗೆ ತರುವ ನಿಟ್ಟಿನಲ್ಲಿ ಬಣ್ಣದ ಮನೆ ವೇದಿಕೆಯ ಕಾರ್ಯ ಶ್ಲಾಘನೀಯವಾಗಿದೆ ಎಂದರು.



ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ಪತ್ರಕರ್ತ, ಸಾಹಿತಿ ಆರ್.ಜೆ ಹಳ್ಳಿ ನಾಗರಾಜ ಮಾತನಾಡಿ, ಗದಗ ಜಿಲ್ಲೆ ಕಲೆಯ ತವರೂರಾಗಿದ್ದು, ಉತ್ಕೃಷ್ಟ ಕಲಾವಿದರನ್ನು ನಾಡಿಗೆ ಕೊಡುಗೆಯಾಗಿ ನೀಡಿದೆ. ಸಾಹಿತ್ಯ, ಚಿತ್ರಕಲೆ ಹಾಗೂ ರಂಗಭೂಮಿ ಒಟ್ಟಿಗೆ ಚಲಿಸುವುದು ಈ ಕಾಲದ ಅನಿವಾರ್ಯತೆಯಾಗಿದ್ದು, ಪಾಲಕರು ತಮ್ಮ ಮಕ್ಕಳನ್ನು ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಚಿತ್ರಕಲೆ-ಸಾಹಿತ್ಯದಂಥ ಕ್ಷೇತ್ರಗಳಲ್ಲಿ ಅರಳಲು ಆಸ್ಪದ ಮಾಡಿಕೊಡಬೇಕು. ಚಿತ್ರಕಲೆ ಹಾಗೂ ಸಾಹಿತ್ಯಗಳೆರೆಡೂ ಕಾಲಕ್ಕೆ ಅನುಗುಣವಾಗಿ ಆಧುನಿಕ ತಂತ್ರಜ್ಞಾನವನ್ನು ಒಳಗೊಳ್ಳುತ್ತಾ ಸಾಗಿದ್ದು, ನಾವು ಇದಕ್ಕೆ ಒಗ್ಗಿಕೊಳ್ಳಬೇಕು ಎಂದರು. ಖ್ಯಾತ ಕಲಾವಿದ ಹಾಗೂ ಸಂಘಟಕ ಬಿ.ಎಸ್ ದೇಸಾಯಿ ಮಾತನಾಡಿ, ಸಾಹಿತ್ಯ ಹಾಗೂ ಕಲೆಯ ಸಂಬಂಧ ಇಂದು ನಿನ್ನೆಯದಲ್ಲ. ಆದರೆ ಈಗ ಹಳೆ ಬೇರಿಗೆ ಹೊಸ ಚಿಗುರಿನ ಸಾಂಗತ್ಯ ಬೇಕಿದ್ದು, ಇಂಥ ಪರಿಕಲ್ಪನೆಯನ್ನು ಸಾಕಾರಗೊಳಿಸುತ್ತಿರುವ ವಿಜಯ ಕಿರೇಸೂರ್ ನಿಜಕ್ಕೂ ಕನಸುಗಳನ್ನು ನನಸಾಗಿಸುವ ವ್ಯಕ್ತಿ. 40 ಸಾವಿರಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದ ಬಣ್ಣದ ಮನೆಯ 'ಚಿಣ್ಣರ ಚಿತ್ರ ಚಿತ್ತಾರ' ಚರಿತ್ರಾರ್ಹ ಕಾರ್ಯಕ್ರಮವಾಗಿದ್ದು, ಮಕ್ಕಳು ನಮ್ಮ ಕಲೆ ಹಾಗೂ ಸಂಸ್ಕೃತಿಯ ವಾರಸುದಾರರು ಎಂಬ ಜಾಗೃತಪ್ರಜ್ಞೆ ಈ ಎಲ್ಲ ಚಟುವಟಿಕೆಗಳ ಹಿಂದಿದೆ. ಈ ಕಮ್ಮಟದ ಅಡಿಯಲ್ಲಿ ತಯಾರಾಗುವ 300 ಕಲಾವಿದರ ಜೀವನ-ಸಾಧನೆಗಳುಳ್ಳ ಕೃತಿ ನಿಜಕ್ಕೂ ಆಕರಗ್ರಂಥವಾಗಲಿದೆ ಎಂದರು.

ಭಾರತಿ ಪತ್ತಾರ ಪ್ರಾರ್ಥಿಸಿದರು. ಮರುಳಸಿದ್ದಪ್ಪ ದೊಡಮನಿ ಸ್ವಾಗತಿಸಿದರೆ, ಡಾ. ದತ್ತಪ್ರಸನ್ನ ಪಾಟೀಲ ನಿರೂಪಿಸಿದರು. ವೇದಿಕೆ ಮೇಲೆ ಎ.ಪಿ ಅಕ್ಕಿ, ಸಂಸ್ಕೃತಿ ಕನ್ವೆನ್ಷನ್ ಮಾಲೀಕರಾದ ಸುನೀತಾ ಗಂಗಾಧರ, ವಿಶ್ವನಾಥ ಗುಗ್ಗರಿ ಇದ್ದರು.

> 42 ಸಾವಿರ ಮಕ್ಕಳು ಭಾಗವಹಿಸಿ ಪ್ರಶಸ್ತಿ ಪತ್ರ ಪಡೆದ 'ಚಿಣ್ಣರ ಚಿತ್ರ ಚಿತ್ತಾರ' ಕಾರ್ಯಕ್ರಮದ ಮುಂದಿನ ಭಾಗವಾಗಿ ಈ ಸಾಹಿತ್ಯಕಮ್ಮಟ ಆಯೋಜಿಸಿದ್ದು, ಸ್ಪರ್ಧೆಯಲ್ಲಿ ಉತ್ತಮ ಚಿತ್ರ ಬಿಡಿಸಿದ 300 ಮಕ್ಕಳಿಗೆ ಶ್ರೇಷ್ಠ ಕಲಾವಿದರ ಹೆಸರಿನಲ್ಲಿ 'ಲಿಟ್ಲ್ ಆರ್ಟಿಸ್ಟ್' ಪ್ರಶಸ್ತಿ ಕೊಡಲು ತೀರ್ಮಾನಿಸಿದ್ದೇವೆ. ಕಲಾವಿದರ ಹೆಸರಿನಲ್ಲಿ ಪ್ರಶಸ್ತಿ ನೀಡುವಾಗ ಅವರುಗಳ ಚೆಂದದ ಪರಿಚಯ ಸೇರಿಸುವ ಉದ್ದೇಶದಿಂದ ಅದು ಬರಹಗಾರರಿಂದ ವಿಭಿನ್ನವಾಗಿ ಮೂಡಿಬಂದರೆ ಚೆನ್ನ ಎಂಬ ನಿಟ್ಟಿನಲ್ಲಿ ಲೇಖಕರನ್ನು ಸಂಯೋಜಿಸಿಕೊಂಡಿದ್ದು, ಮಗುವಿಗೂ-ಪಾಲಕರಿಗೂ ಸ್ಪೂರ್ತಿಯಾಗುವಂತೆ ಓದುಗರ ಮನವನ್ನೂ ಸೆಳೆಯುವಂತೆ ಬರಹಗಾರರು ವ್ಯಕ್ತಿಚಿತ್ರ ಬರೆಯಲಿ.
>
> **– ವಿಜಯ ಕಿರೇಸೂರ.**
> ಸಂಚಾಲಕರು, ಬಣ್ಣದಮನೆ ಸಾಂಸ್ಕೃತಿಕ ವೇದಿಕೆ.

## ಸೆ. 13ರಂದು ನರಗುಂದ ತಾಲೂಕು ಮಟ್ಟದ ದಸರಾ ಕ್ರೀಡಾಕೂಟ

**■ ವಿಜಯಸಾಕ್ಷಿ ಸುದ್ದಿ, ಗದಗ**

2023-24ನೇ ಸಾಲಿನಲ್ಲಿ ನರಗುಂದ ತಾಲೂಕು ಮಟ್ಟದ ದಸರಾ ಕ್ರೀಡಾಕೂಟಗಳನ್ನು ಪುರುಷ ಹಾಗೂ ಮಹಿಳೆಯರಿಗೆ ಸೆಪ್ಟೆಂಬರ್ 13 ರಂದು ತಾಲೂಕಾ ಕ್ರೀಡಾಂಗಣ ನರಗುಂದದಲ್ಲಿ ನಡೆಸಲಾಗುವುದು.

ಆಸಕ್ತ ಕ್ರೀಡಾಪಟುಗಳು ತಮ್ಮ ಹೆಸರನ್ನು ಸೆಪ್ಟೆಂಬರ್ 11 ರೊಳಗಾಗಿ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳು, ನರಗುಂದ ತಾಲೂಕು ಇವರಲ್ಲಿ ನೊಂದಾಯಿಸಿಕೊಳ್ಳುವುದು. ಸೆಪ್ಟೆಂಬರ್ 13 ರಂದು ಮುಂಜಾನೆ 9 ಗಂಟೆಗೆ ಉದ್ಘಾಟನೆ ನಡೆಯಲಿದೆ. ಸದರಿ ಉದ್ಘಾಟನಾ ಸಮಾರಂಭಕ್ಕೆ ನರಗುಂದ ತಾಲೂಕಿನ ಆಸಕ್ತ ಕ್ರೀಡಾಪಟುಗಳು ಹಾಜರಿರುವುದು. ನೋಂದಾಯಿತ ಯುವಕ/ಯುವತಿ ಸಂಘಗಳು ಮಾತ್ರ ಗುಂಪು ಆಟಗಳಲ್ಲಿ ಭಾಗವಹಿಸಲು ಅವಕಾಶವಿದೆ.

**ದಸರಾ ಕ್ರೀಡಾ ಕೂಟದ ಸ್ಪರ್ಧೆಗಳ ವಿವರ:**

**ಪುರುಷರಿಗಾಗಿ ಅಥ್ಲೆಟಿಕ್ಸ್ ಸ್ಪರ್ಧೆಗಳು:** 100ಮೀ. 200ಮೀ, 400ಮೀ. 800ಮೀ. 1500ಮೀ. 5000ಮೀ 10000ಮೀ ಓಟ ಉದ್ದ ಜಿಗಿತ, ಎತ್ತರ ಜಿಗಿತ, ಟ್ರಿಪಲ್ ಜಂಪ್, ಗುಂಡು ಎಸೆತ ಜಾವಲಿನ ಎಸೆತ, ಚಕ್ರ ಎಸೆತ, 110ಮೀ ಹರ್ಡಲ್ಸ್, 4*100 ಮೀ. ರಿಲೇ, 4*400 ಮೀ. ರಿಲೇ.

**ಗುಂಪು ಸ್ಪರ್ಧೆಗಳು:** ವಾಲಿಬಾಲ್, ಕಬಡ್ಡಿ, ಖೋ-ಖೋ, ಥ್ರೋ ಬಾಲ್, ಪುಟ್‌ಬಾಲ್, ಯೋಗ

**ಮಹಿಳೆಯರಿಗಾಗಿ ಅಥ್ಲೆಟಿಕ್ಸ್ :** 100ಮೀ. 200ಮೀ, 400ಮೀ. 800ಮೀ. 1500ಮೀ. 3000,ಮೀ ಓಟ ಉದ್ದ ಜಿಗಿತ, ಎತ್ತರ ಜಿಗಿತ, ಟ್ರಿಪಲ್ ಜಂಪ್, ಗುಂಡು ಎಸೆತ, ಜಾವಲಿನ ಎಸೆತ, ಚಕ್ರ ಎಸೆತ, 100ಮೀ ಹರ್ಡಲ್ಸ್, 4*100 ಮೀ. ರಿಲೇ, 4*400 ಮೀ. ರಿಲೇ

**ಗುಂಪು ಸ್ಪರ್ಧೆಗಳು:** ವಾಲಿಬಾಲ್, ಕಬಡ್ಡಿ, ಖೋ-ಖೋ, ಥ್ರೋ ಬಾಲ್, ಯೋಗ

ನರಗುಂದ ತಾಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳು ನರಗುಂದ ತಾಲೂಕಿನವರೇ ಆಗಿರಬೇಕು. ಹಾಗೂ ಆಧಾರ ಕಾರ್ಡ್ ಅಥವಾ ಗ್ರಾಮ ಪಂಚಾಯತಿಯ ರಹವಾಸಿ ಪತ್ರ ಸದರಿ ದಿನದಂದು ಹಾಜರಪಡಿಸುವುದು. ನೋಂದಾಯಿತ ಯುವಕ/ಯುವತಿ ಸಂಘಗಳು ಮಾತ್ರ ಗುಂಪು ಆಟಗಳಲ್ಲಿ ಭಾಗವಹಿಸಲು ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ ಎನ್.ಆರ್ ನಿಡಗುಂದಿ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳು, ನರಗುಂದ ದೂರವಾಣಿ ಸಂ.9945256311 ಮೂಲಕ ಸಂಪರ್ಕಿಸಬಹುದಾಗಿದೆ.

## ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದ ವಾರ್ಷಿಕೋತ್ಸವ

**■ ವಿಜಯಸಾಕ್ಷಿ ಸುದ್ದಿ, ಗದಗ**

ಗದುಗಿನ ಹೃದಯ ಭಾಗ, ಕಲೆ, ಸಾಂಸ್ಕೃತಿಯ ಧಾರ್ಮಿಕ ಕಾರ್ಯಗಳಿಗೆ ಹೆಸರಾದ ಬಸವೇಶ್ವರ ನಗರದ ಶ್ರೀ ವರಸಿದ್ಧಿ ವಿನಾಯಕ ಟ್ರಸ್ಟ್‌ನ ವತಿಯಿಂದ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದ 31ನೇ ವಾರ್ಷಿಕೋತ್ಸವ ಪ್ರಯುಕ್ತ ರವಿವಾರ ವಿಶೇಷ ಪೂಜಾ ಕಾರ್ಯಕ್ರಮಗಳು ನೆರವೇರಲಿವೆ.



ಬೆಳಿಗ್ಗೆ 6.30ರಿಂದ 10ರವರೆಗೆ ಮಹಾ ರುದ್ರಾಭಿಷೇಕ, ಅಲಂಕಾರ ಪೂಜೆ, ಗಣಹೋಮ, ಬೆಳ್ಳಿ ಗಣಪತಿ ಪಲ್ಲಕ್ಕಿ ಉತ್ಸವ, ಮಹಾ ಮಂಗಳಾರತಿ ನೆರವೇರಲಿದೆ. ಮಧ್ಯಾಹ್ನ 1 ಗಂಟೆಗೆ ಅಡ್ನೂರ-ರಾಜೂರ-ಗದಗ ಬೃಹನ್ಮಠದ ಷ.ಬ್ರ. ಅಭಿನವ ಶ್ರೀ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತು ವಿರೇಶ್ವರ ಪುಣ್ಯಾಶ್ರಮದ ಪೂಜ್ಯಶ್ರೀ ಕಲ್ಲಯ್ಯಜ್ಜನವರು ಮಹಾ ಅನ್ನಸಂತರ್ಪಣೆ ಚಾಲನೆ ನೀಡುವರು.

ಈ ಎಲ್ಲ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಕಲ ಸದ್ಭಕ್ತರು ಆಗಮಿಸಿ ಶ್ರೀ ವರಸಿದ್ಧಿ ವಿನಾಯಕನ ಕೃಪೆಗೆ ಪಾತ್ರರಾಗಬೇಕೆಂದು ಟ್ರಸ್ಟ್‌ನ ಪದಾಧಿಕಾರಿ ಶರಣಯ್ಯ ಹಿರೇಮಠ ತಿಳಿಸಿದ್ದಾರೆ.

## ಸ್ಪಿಂಕ್ಲರ್, ತಾಮ್ರದ ವಾಯರ್ ಕಳ್ಳನ ಬಂಧನ



**■ ವಿಜಯಸಾಕ್ಷಿ ಸುದ್ದಿ, ಲಕ್ಷೇಶ್ವರ**

ಠಾಣಾ ವ್ಯಾಪ್ತಿಯಲ್ಲಿ ಸ್ಪಿಂಕ್ಲರ್ ಸೆಟ್‌ಗಳು ಮತ್ತು ತಾಮ್ರದ ವಾಯರ್‌ಗಳು ಕಳ್ಳತನವಾದ ದೂರಿನ ಹಿನ್ನೆಲೆಯಲ್ಲಿ ಜಿಲ್ಲಾ ಎಸ್‌ಪಿ., ಡಿಎಸ್‌ಪಿ, ಶಿರಹಟ್ಟಿ ವೃತ್ತದ ಸಿಪಿಐರವರು ಮಾರ್ಗದರ್ಶನದಲ್ಲಿ ಪಟ್ಟಣದ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್‌ಗಳಾದ ಯೊಸೆಫ್ ಜಮೂಲಾ ಹಾಗೂ ವಿ.ಜಿ ಪವಾರ ನೇತೃತ್ವದಲ್ಲಿ ಆರೋಪಿಯನ್ನು ಬಂಧಿಸಿ, ಆತನಿಂದ ಸುಮಾರು 40 ಸಾವಿರ ರೂ.ಗಳ ಮೌಲ್ಯದ ಕಳ್ಳತನ ಮಾಡಿದ್ದ ಸಾಮಗ್ರಿಗಳನ್ನು ವಶಪಡಿಸಿಕೊಳ್ಳುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಖಚಿತ ಮಾಹಿತಿಯ ಮೇರೆಗೆ ಸಬ್ ಇನ್ಸ್‌ಪೆಕ್ಟರ್‌ಗಳ ನೇತೃತ್ವದಲ್ಲಿ ಸಿಬ್ಬಂದಿಗಳಾದ ಡಿ.ಎಸ್ ನದಾಫ, ಜಿ.ಆರ್ ಗ್ರಾಮಪುರೋಹಿತ ಶನಿವಾರ ಬೆಳಗಿನ ವೇಳೆಯಲ್ಲಿ ಒಡೆಯರಮಲ್ಲಾಪೂರದ ಹೊನ್ನಪ್ಪ ಮರಿಯಪ್ಪ ಇಂಗಳಗೊಂದಿ, ಇವನಿಗೆ ಹಿಡಿದು ವಿಚಾರಣೆ ಮಾಡಿದಾಗ, ಆರೋಪಿತನು ಆರೋಪಿತನು ಬಾಲೇಹೊಸೂರ ಗ್ರಾಮದ ಕೊಟ್ರಸ್ವಾಮಿ ವೃಷಬೇಂದ್ರಯ್ಯ ಡೋಣಿಕಲ್ಲುಬೆಣ್ಣಿಮಠ ಇವರ ಜಮೀನಿನ ಸುಮಾರು 120 ಮೀಟರ್ ಉದ್ದದ ತಾಮ್ರದ ವಾಯರ್, 36 ಸ್ಪಿಂಕ್ಲರ್ ಸೆಟ್‌ಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದಾಗಿ ಒಪ್ಪಿಕೊಂಡಿದ್ದಾನೆ.

ಆರೋಪಿಯನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾದ ಪಿಎಸ್‌ಐ ಯೊಸೆಫ್ ಜಮೂಲಾ, ಅಪರಾಧ ವಿಭಾಗದ ಪಿಎಸ್‌ಐ ವಿ.ಜಿ ಪವಾರ, ಎಎಸ್‌ಐ ಡಿ.ಕೆ ರಾಠೋಡ, ಎನ್.ಎ ಮೌಲ್ವಿ, ಜಿ.ಎಂ ಬೂದಿಹಾಳ, ಸಿಬ್ಬಂದಿಗಳಾದ ಎಮ್.ಎ ಶೇಖ, ಆರ್.ಎಸ್ ಯರಗಟ್ಟಿ, ಎಮ್.ಡಿ ಲಮಾಣಿ, ಎಮ್.ಎಸ್ ಬಳ್ಳಾರಿ, ಪ್ರಕಾಶ ಮ್ಯಾಗೇರಿ, ಸಿ.ಎಸ್ ಮಠಪತಿ, ಎಲ್.ಡಿ ಹಮ್ಮಗಿ, ಡಿ.ಎಸ್ ನದಾಫ, ಗ್ರಾಮಮರೋಹಿತ, ಎ.ಆರ್ ಕಮ್ಮಾರ, ಎಚ್.ಐ ಕಲ್ಲಣ್ಣವರ, ಮಂಜು ಲಮಾಣಿ, ಮಧು ದಾರವಾಡ, ಸೋಮು ವಾಲ್ಮೀಕಿ, ನಂದಯ್ಯ ಮಠಮಠಿ, ಪಾಂಡುರಂಗರಾವ್, ರಾಮು ಮಾಳೋತ್ತರ, ಪರಶುರಾಮ ತೋರಾತ್, ಸಂಜೀವ ಕೊರಡೂರ, ಅಪ್ಪಣ್ಣ ರಾಠೋಡ ಇವರ ಕಾರ್ಯಕ್ಕೆ ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಹಾಲಗೊಂಡ ಬಸವೇಶ್ವರ ರಥೋತ್ಸವ ಸೆ.11ಕ್ಕೆ

**■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ಇಲ್ಲಿಯ ಐತಿಹಾಸಿಕ ಹಾಲಗೊಂಡ ಬಸವೇಶ್ವರ ದೇವಸ್ಥಾನದ ರಥೋತ್ಸವವು ಶ್ರಾವಣ ಮಾಸದ ಕೊನೆಯ ಸೋಮವಾರ ಸೆ.11ರಂದು ಸಂಜೆ ಜರುಗಲಿದೆ.

ಬಜಾರ ರಸ್ತೆಯಲ್ಲಿ ಎಳೆಯುವ ತೇರು ವಿರುಪಾಕ್ಷೇಶ್ವರ ದೇವಸ್ಥಾನವರೆಗೂ ಸಾಗುವುದು. ರಥೋತ್ಸವದಲ್ಲಿ ವಿವಿಧ ಜಾನಪದ ಕಲಾ ವಾದ್ಯ ತಂಡಗಳು ಭಾಗವಹಿಸುವವು. ಇದಕ್ಕೂ ಪೂರ್ವ ಬೆಳಿಗ್ಗೆ ಬಸವಣ್ಣ ಮೂರ್ತಿಗೆ ಹೂವುಗಳಿಂದ ಅಲಂಕರಿಸಿ, ಧಾರ್ಮಿಕ ವಿಧಿ-ವಿಧಾನಗಳೊಂದಿಗೆ ವಿಶೇಷ



ಪೂಜೆ, ಅಭಿಷೇಕ ಕಾರ್ಯಕ್ರಮಗಳು ನೆರವೇರಲಿದೆ.

ನಂತರ ದೇವಸ್ಥಾನ ಮುಂದೆ ಸಿದ್ಧ ಸಮಾಧಿ ಯೋಗ ಬಳಗ ಆಶ್ರಯದಲ್ಲಿ ಆಚಾರ್ಯ ರಾಘವೇಂದ್ರ ಕೊಪ್ಪಳ ಅವರ ನೇತೃತ್ವದಲ್ಲಿ ಮಹಾಮೃತ್ಯುಂಜಯ ಹೋಮ ನೆರವೇರಲಿದೆ. ಗ್ರಾಮದ 14 ಭಜನಾ ಸಂಘಗಳಿಂದ ನಾಡಿನ ಶಿವ ಶರಣರ, ಮಹಾತ್ಮರ ಭಾವಚಿತ್ರ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಯಲ್ಲಿ ನಡೆಯಲಿದೆ. 12ರಂದು ಸಂಜೆ 6ಕ್ಕೆ ಲಘು ರಥೋತ್ಸವ, 13ರಂದು ಸಂಜೆ ಮಾರುತಿ ದೇವಸ್ಥಾನದ ಬಯಲು ಜಾಗದಲ್ಲಿ ಗ್ರಾಮದ ಕುಸ್ತಿ ಪೈಲ್ವಾನರ ಸಂಘದ ಆಶ್ರಯದಲ್ಲಿ ಬಯಲು ಕುಸ್ತಿಗಳು ಜರುಗಲಿವೆ ಎಂದು ಹಾಲಗೊಂಡ ಬಸವೇಶ್ವರ ಸೇವಾ ಸಮಿತಿಯ ಪ್ರಕಟಣೆ ತಿಳಿಸಿದೆ.

## ಬಸವೇಶ್ವರ ದೇವರ ಜಾತ್ರೆ ಸೆ.11ಕ್ಕೆ

**■ ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಸಮೀಪದ ಹರ್ತಿ ಬಸವೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವವು ಸೆ.11, ಸೋಮವಾರ ನೆರವೇರಲಿದೆ. ಬೆಳಿಗ್ಗೆ 7 ಗಂಟೆಗೆ ಬಸವಣ್ಣ ದೇವರಿಗೆ ವಿಶೇಷ ರುದ್ರಾಭಿಷೇಕ, ವೀರಭದ್ರ ದೇವಸ್ಥಾನದಲ್ಲಿ ಪುರವಂತರಿಂದ ವಡುಪು ಕಾರ್ಯ, ಗ್ರಾಮ ದೇವತೆಗೆ ಉಡಿ ತುಂಬುವ ಕಾರ್ಯಕ್ರಮ, ಅನ್ನಸಂತರ್ಪಣೆ ನಡೆಯಲಿದೆ.

ಸಾಯಂಕಾಲ 5.30ಕ್ಕೆ ರಥೋತ್ಸವ ಜರುಗಲಿದ್ದು, ದಿವ್ಯ ಸಾನ್ನಿಧ್ಯವನ್ನು ಹೊಸಳ್ಳಿಯ ಬೂದೀಶ್ವರಮಠದ ಅಭಿನವ ಬೂದೀಶ್ವರ ಮಾಹಾಸ್ವಾಮಿಗಳು, ಮುಖ್ಯ ಅತಿಥಿಗಳಾಗಿ ಮಾಜಿ



ಶಾಸಕ ಡಿ.ಆರ್ ಪಾಟೀಲ್ ಸೇರಿದಂತೆ ಗ್ರಾಮದ ಸದ್ಭಕ್ತ ಮಂಡಳಿಯವರು ಪಾಲ್ಗೊಳ್ಳುವರು ಎಂದು ಬಸವೇಶ್ವರ ದೇವಸ್ಥಾನ ಕಮಿಟಿ ಅಧ್ಯಕ್ಷ ಎ.ಎಸ್ ಕೊಟ್ರಶೆಟ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಜ್ಯದ, ರೈತರ ಅಭಿವೃದ್ಧಿಗೆ ಸರ್ಕಾರ ಬದ್ಧ

▶▶ ಮೊದಲನೇ ಪುಟದಿಂದ



ತಕ್ಷಣದ ಬೆಳೆಗಳನ್ನು ಮಾಡಬೇಕು ಎಂಬುದರ ಬಗ್ಗೆ ವಿಜ್ಞಾನಿಗಳು ಆಸಕ್ತಿ ವಹಿಸಿ, ಸಂಶೋಧನೆ ಮಾಡಬೇಕು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಕೃಷಿ ಭಾಗ್ಯ, ಕೃಷಿ ಯಂತ್ರಧಾರೆ ಯೊಜನೆಗಳ ಮರುಜಾರಿ ಘೋಷಿಸಲಾಗಿದೆ. ರಾಜ್ಯದಲ್ಲಿ ಸಣ್ಣ ರೈತರು ಹೆಚ್ಚಿರುವದರಿಂದ, ಉನ್ನತ ತಾಂತ್ರಿಕತೆ ಇರುವ ಕಟಾವು ಯಂತ್ರಗಳನ್ನು ರೈತರಿಗೆ ನೀಡಲು ಕ್ರಮವಹಿಸಲಾಗಿದೆ. ಕೋರಮಂಗಲ ಚಲ್ಲಘಟ್ಟ(ಕೆಸಿ) ವ್ಯಾಲಿ ಮೂಲಕ ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ಹೆಚ್ಚಳಕ್ಕೆ, ನೀರಾವರಿಗೆ ಅನಕೂಲ ಮಾಡಲಾಗಿದೆ. ನೀರಿನ ಸಮಸ್ಯೆ ಪರಿಹಾರಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಕೃಷಿ ಸಚಿವ ಎನ್.ಚಲುರಾಯಸ್ವಾಮಿ ಮಾತನಾಡಿ, ಅನೇಕ ವೀರರ ತ್ಯಾಗ, ಬಲಿದಾನಗಳಿಂದ ಸ್ವಾತಂತ್ರ್ಯ ಸಿಕ್ಕಿದೆ. ರೈತರು ಅನೇಕ ಸಮಸ್ಯೆಗಳಿಂದ ತೆ-ಊಂದರೆ ಅನುಭವಿಸುತ್ತಿದ್ದು, ಅವುಗಳ ಪರಿಹಾರಕ್ಕಾಗಿ ರಾಜ್ಯ ಸರಕಾರ ಅನೇಕ ಯೋಜನೆ ಜಾರಿಗೊಳಿಸಿದೆ. ದೇಶಕ್ಕೆ ಮಾದರಿಯಾಗುವ ಕಾರ್ಯಕ್ರಮಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾರಿಗೊಳಿಸಿದ್ದಾರೆ. ಸರಕಾರದ ಆರ್ಥಿಕ ಸುರಕ್ಷತೆ ಕಾಪಾಡಿಕೊಂಡು ಬಡವರ, ಹಿಂದುಳಿದವರ, ರೈತರ, ಮಹಿಳೆಯರ ಅಭಿವೃದ್ಧಿಗಾಗಿ ವಿಶೇಷ ಪಂಚ ಗ್ಯಾರಂಟಿ ಯೋಜನೆಗಳನ್ನು ಸರಕಾರ ಅನುಷ್ಠಾನಗೊಳಿಸಿದೆ ಎಂದರು.

ಈ ವರ್ಷ ಸಿರಿಧಾನ್ಯ ಅಂತಾರಾಷ್ಟ್ರೀಯ ವರ್ಷ ವಾಗಿರುವದರಿಂದ, ರಾಜ್ಯ ಸರಕಾರದಿಂದ ಸಿರಿಧಾನ್ಯ ಬೆಳೆಯುವ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.10 ಸಾವಿರ ಸಹಾಯಧನವನ್ನು ನೀಡಲಾಗುತ್ತಿದೆ. ಕಬ್ಬು ಹಾಗೂ ಇತರ ಬೆಳೆಗಳ ಕಟಾವು ತಾಂತ್ರಿಕತೆ ಸುಧಾರಣೆಗಾಗಿ ಐಟಿ ಹಬ್ ಸ್ಥಾಪನೆಗೆ ರಾಜ್ಯ ಸರಕಾರ ರೂ.50 ಕೋಟಿ ಮೀಸಲಿರಿಸಿದೆ. ರೈತರಿಗೆ ಬೀಜ, ಗೊಬ್ಬರ, ಕೀಟನಾಶಕಗಳು ಕೊರತೆ ಅಗದಂತೆ ಮುನ್ನೆಚ್ಚರಿಕೆ ವಹಿಸಿ, ಅಗತ್ಯ ದಾಸ್ತಾನು ಮಾಡಲಾಗಿದೆ ಎಂದು ಸಚಿವರು ಹೇಳಿದರು.

ಮಳೆ ಕೊರತೆಯಿಂದಾಗಿ ಮುಂಗಾರು ವಿಫಲವಾಗಿದ್ದು, ಬರಗಾಲ ಘೋಷಣೆಗೆ ಸರಕಾರ ಉಪಸಮಿತಿ ರಚಿಸಿದೆ. ಈಗಾಗಲೇ 196 ತಾಲೂಕುಗಳಲ್ಲಿ ಬರ ಅಧ್ಯಯನ ಕೈಗೊಳ್ಳಲಾಗಿದೆ. ವರದಿ ಪರಿಶೀಲಿಸಿ, ಮುಂದಿನ 3-4 ದಿನಗಳಲ್ಲಿ ಎಷ್ಟು ತಾಲೂಕುಗಳು ಬರಪೀಡಿತ ಎಂದು ಸರಕಾರ ಘೋಷಿಸಲಿದೆ ಎಂದು ಕೃಷಿ ಸಚಿವರು ತಿಳಿಸಿದರು.

ಕಾರ್ಮಿಕ ಇಲಾಖೆ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಮಾತನಾಡಿ, ರಾಜ್ಯ ಸರಕಾರ ಎಪಿಎಂಸಿ ಕಾಯ್ದೆ ತಿದ್ದುಪಡಿ ಮಾಡಿ ರೈತರಿಗೆ ಅನಕೂಲ ಮಾಡಿದೆ. ಪ್ರಸ್ತುತ ರಾಜ್ಯ ಸರಕಾರ ರೈತರಿಗೆ 5 ಲಕ್ಷ ರೂ. ಬಡ್ಡಿ ರಹಿತ ಸಾಲ ಮತ್ತು 10ರಿಂದ 15 ಲಕ್ಷ ರೂ.ವರೆಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲು 25 ಸಾವಿರ ಕೋಟಿ ರೂ.ಗಳನ್ನು ಮೀಸಲಿಟ್ಟಿದೆ. ರೈತರ, ಬಡವರ ಶ್ರೇಯೋಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೃಷಿ ಸಚಿವ ಹಾಗೂ ಕೃಷಿ ವಿವಿ ಸಮ ಕುಲಾಧಿಪತಿ ಎನ್.ಚಲುವರಾಯಸ್ವಾಮಿ ಅವರು ಕೃಷಿ ವಿವಿಯ ವಿಶೇಷ ಪ್ರಕಟಣೆಗಳನ್ನು ವೇದಿಕೆಯಲ್ಲಿ ಬಿಡುಗಡೆ ಮಾಡಿದರು. ಶ್ರೇಷ್ಠ ಕೃಷಿ ಪ್ರಶಸ್ತಿ ಪುರಸ್ಕೃತ ರೈತ ಮಹಿಳೆಯರಿಗೆ, ಪ್ರಗತಿಪರ ರೈತರಿಗೆ ಮುಖ್ಯಮಂತ್ರಿಗಳು ಪ್ರಶಸ್ತಿ ವಿತರಿಸಿ, ಗೌರವಿಸಿದರು.

ಸರಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್, ಶಾಸಕರಾದ ಪ್ರಸಾದ ಅಬ್ಬಯ್ಯ, ಎನ್.ಎಚ್ ಕೋನರಡ್ಡಿ, ಬಸವರಾಜ ಶಿವಣ್ಣನವರ, ಕೃಷಿ ಇಲಾಖೆ ಕಾರ್ಯದರ್ಶಿ ಅನ್ಬುಕುಮಾರ, ಕೃಷಿ ಇಲಾಖೆ ಆಯುಕ್ತರಾದ ವೈ.ಎಸ್ ಪಾಟೀಲ, ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ಪೊಲೀಸ್ ಆಯುಕ್ತರಾದ ರೇಣುಕಾ ಸುಕುಮಾರ, ಜಿ.ಪಂ ಸಿಇಓ ಸ್ವರೂಪ್ ಟಿ.ಕೆ., ಮಾಜಿ ಶಾಸಕಿ ಕುಸುಮಾವತಿ ಶಿವಳ್ಳಿ ಹಾಗೂ ಕೃಷಿ ವಿವಿ ಆಡಳಿತ ಮಂಡಳಿ ಸದಸ್ಯರು, ಅಧಿಕಾರಿಗಳು ವೇದಿಕೆಯಲ್ಲಿದ್ದರು.

ಕೃಷಿ ವಿವಿ ಕುಲಪತಿ ಡಾ. ಪಿ.ಎಲ್ ಪಾಟೀಲ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

ರಾಜ್ಯ ಸರಕಾರದ ವಿರುದ್ಧ ಬಿಜೆಪಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಶಾಸಕ ಸಿ.ಸಿ ಪಾಟೀಲ

# ರೈತಪರ ಯೋಜನೆಗಳನ್ನು ರದ್ದುಪಡಿಸಿರುವುದು ಖಂಡನೀಯ



■ವಿಜಯಸಾಕ್ಷಿ ಸುದ್ದಿ, ನರಗುಂದ

ಮಳೆಯ ಅಭಾವದಿಂದ ಬರಗಾಲವುಂಟಾಗಿ ಜಲಾಶಯಗಳಲ್ಲಿ ನೀರಿನ ಮಟ್ಟ ಇಳಿಕೆಯಾಗಿದೆ. ರೈತರ ಪಂಪಸೆಟ್‌ಗಳಿಗೆ ಹಗಲಿನಲ್ಲಿ ವಿದ್ಯುತ್ ಪೂರೈಕೆ ಆಗುತ್ತಿಲ್ಲ. ಬಿತ್ತನೆ ಮಾಡಿದ ಶೇ.80ರಷ್ಟು ಬೆಳೆಗಳನ್ನು ರಕ್ಷಿಸಿಕೊಳ್ಳಲು ರೈತರು ಪರದಾಡುತ್ತಿದ್ದು, ವಿದ್ಯುತ್ ಒದಗಿಸದ ರಾಜ್ಯ ಸರಕಾರಕ್ಕೆ ರೈತರು ಛೀಮಾರಿ ಹಾಕುತ್ತಿದ್ದಾರೆಂದು ಶಾಸಕ ಸಿ.ಸಿ ಪಾಟೀಲ ಆಕ್ರೋಶ ವ್ಯಕ್ತಡಿಸಿದರು.

ಪಟ್ಟಣದ ಶಿವಾಜಿ ಮಹಾರಾಜ್ ವೃತ್ತದಲ್ಲಿ ರೈತ ವಿರೋಧಿ ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ಬಿಜೆಪಿ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ತಹಸೀಲ್ದಾರ ಶ್ರೀಶೈಲಪ್ಪ ತಳವಾರ ಅವರಿಗೆ ಮನವಿ ಅರ್ಪಿಸಿ ಮಾತನಾಡಿದ ಅವರು, ಕಾಂಗ್ರೆಸ್ ಸರಕಾರವು ರೈತಪರ ಯೋಜನೆಗಳಾದ ಕಿಸಾನ್ ಸಮ್ಮಾನ್, ರೈತ ವಿಧ್ಯಾನಿಧಿ, ಭೂಸಿರಿ, ಶ್ರಮಶಕ್ತಿ, ರೈತ ಸಂಪದ, ಎಪಿಎಂಸಿ ಕಾಯ್ದೆ, ಕೃಷಿ ಭೂಮಿ ಮಾರಾಟ ಕಾಯ್ದೆ, ಜಿಲ್ಲೆಗೊಂದು ಗೋಶಾಲೆ ಯೋಜನೆ, ಕ್ರೀಡಾ ಸಮೃದ್ಧಿ ಸಹಕಾರ ಬ್ಯಾಂಕ್‌ನಂತಹ ಬಿಜೆಪಿ ಸರಕಾರ ಜಾರಿಗೆ ತಂದ ಎಲ್ಲ ರೈತಪರ ಯೋಜನೆಗಳನ್ನು ರದ್ದು ಮಾಡಿ ಕೃಷಿ ಕ್ಷೇತ್ರವನ್ನು ನಿರ್ಲಕ್ಷಿಸುತ್ತಿದೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 143ಕ್ಕೂ ಹೆಚ್ಚು ತಾಲೂಕುಗಳು ಬರ ಪರಿಸ್ಥಿತಿಯನ್ನು ಎದುರಿಸುತ್ತಿವೆ. 42 ಜನ ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿವೆ. ತಮ್ಮ ಗ್ಯಾರಂಟಿಗಳನ್ನು ಪೂರೈಸಲು ರೈತರ ಮಕ್ಕಳ ಯೋಜನೆಗಳನ್ನು ರದ್ದು ಮಾಡುತ್ತಿದೆ ಎಂದು ಕಾಂಗ್ರೆಸ್ ಆಡಳಿತವನ್ನು ಖಂಡಿಸಿದರು.

ನರಗುಂದ ಮಂಡಲದ ರೈತ ಮೋರ್ಚಾ ಅಧ್ಯಕ್ಷ ಮಲ್ಲಪ್ಪ ಪೂಜಾರ, ಅಜ್ಜನಗೌಡ ಪಾಟೀಲ, ಚಂಬಣ್ಣ ವಾಳದ, ಎಮ್.ಹೆಚ್ ತಿಮ್ಮನಗೌಡ್ರ, ಅಜ್ಜಪ್ಪ ಹುಡೇದ, ಸಂಭಾಜಿ ಕಾಶೀದ, ಶಿವಾನಂದ ಮುತ್ತವಾಡ, ಸಂಗಪ್ಪ ಪೂಜಾರ, ಮಹೇಶ ಹಟ್ಟಿ, ಶಿವನಗೌಡ ಕರಿಗೌಡ್ರ, ಚಂದ್ರು ದಂಡಿನ, ಶಂಕರ ಪಲ್ಲಣಕರ, ಮಂಜು ಮೆಣಸಗಿ, ಯುವ ಘಟಕದ ಅಧ್ಯಕ್ಷ ವಿಠ್ಠಲ ಹವಾಲ್ದಾರ, ಸಿದ್ದೇಶ ಹೂಗಾರ, ಸಂತೋಷ ಹಂಚಿನಾಳ ಸೇರಿದಂತೆ ನೂರಾರು ಜನರಿದ್ದರು.

# ಜಕ್ಕಲಿ ವೀರಭದ್ರೇಶ್ವರ ಜಾತ್ರೆ, ಕಳಸಾರೋಹಣ ಸೆ.11ಕ್ಕೆ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಮೀಪದ ಜಕ್ಕಲಿ ಗ್ರಾಮದಲ್ಲಿ ಸೆ.11ರಂದು ಶ್ರೀ ವೀರಭದ್ರೇಶ್ವರ ದೇವರ ಲಘು ರಥೋತ್ಸವ ಹಾಗೂ ದೇವಸ್ಥಾನದ ನೂತನ ಗೋಪುರದ ಕಳಸಾರೋಹಣ ಕಾರ್ಯಕ್ರಮ ನೆರವೇರಲಿದೆ.

ನಿಡಗುಂದಿಕೊಪ್ಪದ ಶಾಖಾ ಶಿವಯೋಗಮಂದಿರ ಶ್ರೀಮಠದ ಅಭಿನವ ಚನ್ನಬಸವ ಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ ನೂತನವಾಗಿ ನಿರ್ಮಿಸಿರುವ ಗೋಪುರಕ್ಕೆ ಶ್ರೀಗಳು ಬೆಳಿಗ್ಗೆ 6ಕ್ಕೆ ಕಳಸಾರೋಹಣ ನೆರವೇರಿಸುವರು. ಜಾತ್ರೆಯ ಅಂಗವಾಗಿ ಬೆಳಿಗ್ಗೆ 5ಕ್ಕೆ ವೀರಭದ್ರೇಶ್ವರ ದೇವರಿಗೆ ವಿಶೇಷ ಪೂಜೆ, ಮಹಾ ರುದ್ರಾಭಿಷೇಕ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ ಹಾಗೂ ಸಂಜೆ 5.30ಕ್ಕೆ ದೇವಸ್ಥಾನದಿಂದ ಗ್ರಾಮದ ಪ್ರಮುಖ ಬೀದಿಗಳ ಮುಖಾಂತರ ಶ್ರೀ ಕಲ್ಮೇಶ್ವರ ದೇವಸ್ಥಾನದವರೆಗೆ ನರೇಗಲ್ಲ ಹಾಗೂ ಕೋಡಿಕೊಪ್ಪದ ಪುರವಂತರು ಒಡುಪಗಳನ್ನು ಹೇಳುತ್ತಾ ಲಘು ರಥೋತ್ಸವವು ಸಾಗಲಿದೆ. ಉತ್ಸವವು ಸುಮಂಗಲಿಯರ ಕಳಸದಾರತಿ, ಪೂರ್ಣಕುಂಭ, ದೇವಸ್ಥಾನದ ಸಮ್ಮಾಳ ಭಾಜಾ, ವೀರಗಾಸೆ, ಡೊಳ್ಳು ಕುಣಿತ, ಸಕಲ ವಾದ್ಯ ವೈಭವದೊಂದಿಗೆ ಜರುಗಲಿದೆ. ಭಕ್ತಾದಿಗಳು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು, ಸೇವೆ ಸಲ್ಲಿಸಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕೆಂದು ಜಾತ್ರಾ ಸೇವಾ ಸಮಿತಿ ಪ್ರಕಟಣೆಯಲ್ಲಿ ಕೋರಿದೆ.

# ಕಲೋತ್ಸವ ಮಕ್ಕಳ ಪ್ರತಿಭೆಗೆ ಹಿಡಿದ ಕನ್ನಡಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶಿಕ್ಷಣ ಅತ್ಯಮೂಲ್ಯವಾದ ಸಂಪತ್ತಾಗಿದೆ. ಈ ಜ್ಞಾನ ಸಂಪತ್ತನ್ನು ಇತರರಿಗೆ ಹಂಚಿದಷ್ಟು ಸಮೃದ್ಧವಾಗುತ್ತದೆ. ಈ ಮೂಲಕ ಅಂತಾರಾಷ್ಟ್ರೀಯ ಸಾಕ್ಷರತಾ ದಿನ ಆಚರಣೆಗೆ ಒಂದು ಮಹತ್ವ ಬರುವಂತೆ ಕಾರ್ಯ ನಿರ್ವಹಿಸಬೇಕು ಎಂದು ಶಿರಹಟ್ಟಿ ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎಂ ಮುಂದಿನಮನಿ ಅಭಿಪ್ರಾಯಪಟ್ಟರು.




ಅವರು ಉಮಾ ವಿದ್ಯಾಲಯ ಹೈಸ್ಕೂಲ್ ಆವರಣದಲ್ಲಿ ಲಕ್ಷ್ಮೇಶ್ವರ ದಕ್ಷಿಣ ಉರ್ದು ಪ್ರೌಢಶಾಲಾ ವಿಭಾಗದ ಕ್ಲಸ್ಟರ್ ಮಟ್ಟದ ಕಲೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕಲೋತ್ಸವ ಮಕ್ಕಳ ಪ್ರತಿಭೆಗೆ ಹಿಡಿದ ಕನ್ನಡಿಯಾಗಿದೆ. ಮಕ್ಕಳಲ್ಲಿ ಹುದುಗಿರುವ ಅಂತಃಪ್ರತಿಭೆಯನ್ನು ತೋರ್ಪಡಿಸಿ, ತನ್ಮೂಲಕ ಉತ್ತಮ ಸಾಧನೆ ಮಾಡುವ ವೇದಿಕೆ ಇದಾಗಿದೆ. ಮಕ್ಕಳು ಜಾಣ್ಮೆಯಿಂದ ಇದರಲ್ಲಿ ಪಾಲ್ಗೊಂಡು ಉತ್ತಮ ಸಾಧನೆ ಮಾಡುವ ಮೂಲಕ ಶಾಲೆಗೆ ಕೀರ್ತಿ ತನ್ನಿ ಎಂದು ಹೇಳಿದರು.

ಜಾನಪದ ನೃತ್ಯ ಪ್ರದರ್ಶನಕ್ಕೆ ಪುರಸಭೆ ಸದಸ್ಯ ವಿಜಯ ಕರಡಿ ಚಾಲನೆ ನೀಡಿದರು. ಕರಾಸನೌ ಸಂಘ ತಾಲೂಕಾಧ್ಯಕ್ಷ ಡಿ.ಎಚ್ ಪಾಟೀಲ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷ ಬಿ.ಎಸ್ ಹರಲಾಪುರ, ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ಅಧ್ಯಕ್ಷ ಎಲ್.ಎಸ್ ಅರಳಹಳ್ಳಿ ಮಾತನಾಡಿದರು. ಬಿಆರ್‌ಪಿ ಬಿ.ಎಂ ಯರಗುಪ್ಪಿ ಅಂರಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಅಂಗವಾಗಿ ಪ್ರತಿಜ್ಞಾವಿಧಿ ಬೋಧಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖ್ಯೋಪಾಧ್ಯಾಯ ಎಸ್.ಎಚ್ ಪೂಜಾರ ವಹಿಸಿದ್ದರು. ಎಸ್.ಡಿ ಲಮಾಣಿ, ಶಿಕ್ಷಣಾಧಿಕಾರಿಗಳ ಸಂಘದ ಎಂ.ಬಿ ಹೊಸಮನಿ, ಈಶ್ವರ ಮೆಡ್ಲೇರಿ, ವಿ.ಡಿ ಹುಲಬಜಾರ, ಎ.ಆರ್ ಮಿಯಾನವರ, ಎಂ.ಎನ್ ಭರಮಗೌಡ್ರ, ಎನ್.ಎನ್ ಶಿಗ್ಲಿ, ಆರ್.ಎಫ್ ದೊಡ್ಡಮನಿ, ಎಸ್ ಜಯಾ, ಎ.ಜಿ ಲಿಂಗಶೆಟ್ಟಿ, ಜಿ.ಎಂ ಕೆಂಚಕ್ಕನವರ, ಎಚ್.ಎಫ್ ಪೂಜಾರ, ಎಂ.ಎಫ್ ಗೋಣೆಪ್ಪನವರ, ಎಸ್.ಡಿ ಬಂಡಿವಡ್ಡರ ಹಾಗೂ ಶಿಕ್ಷಕರು ಪಾಲ್ಗೊಂಡಿದ್ದರು. ಸಿಆರ್‌ಪಿಗಳಾದ ಸತೀಶ್ ಬೋಮಲೆ, ಎನ್.ಎ ಮುಲ್ಲಾ, ಉಮೇಶ್ ನೇಕಾರ, ವಿ.ಎನ್ ಶೆಟ್ಟರ್ ನಿರೂಪಿಸಿದರು.

ಅಂಜುಮನ್ ಇಸ್ಲಾಂ ಕಮಿಟಿ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಶಾಸಕ ಪಾಟೀಲ್

# ಏಕರೂಪ ನಾಗರಿಕತೆ ವಿರುದ್ಧ ನಾವೆಲ್ಲ ಗಟ್ಟಿಯಾಗಬೇಕಿದೆ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಸಂವಿಧಾನ ಬದಲಾವಣೆಯ ಮನಸ್ಥಿತಿಯುಳ್ಳವರಿಂದ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವ ಹುನ್ನಾರ ನಡೆದಿದ್ದು, ನಾವೆಲ್ಲರೂ ಗಟ್ಟಿಯಾಗಿ ಎದುರಿಸಬೇಕಿದೆ ಎಂದು ಶಾಸಕ ಜಿ.ಎಸ್ ಪಾಟೀಲ ಹೇಳಿದರು.



ಸಮೀಪದ ರಾಜೂರ ಗ್ರಾಮದ ಅಂಜುಮನ್ ಇಸ್ಲಾಂ ಕಮಿಟಿಯಿಂದ ಶಾಸಕ ಜಿ.ಎಸ್ ಪಾಟೀಲ ಹಾಗೂ ಟಕ್ಕೇದ ದರ್ಗಾದ ನಿಜಾಮುದ್ದಿನ್ ಷಾ ಅಶ್ರಫಿ ಅವರಿಗೆ ಶನಿವಾರ ನಡೆದ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾಂಗ್ರೆಸ್ ಘೋಷಿಸಿದ 5 ಗ್ಯಾರಂಟಿಗಳ ಕುರಿತು ವಿರೋಧ ಪಕ್ಷಗಳು ಕುಹಕವಾಡಿದ್ದವು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಡವರ ಪರವಾದ ನಿಲುವು ಹೊಂದಿದ್ದು, ಕೊಟ್ಟ ಮಾತಿನಂತೆ ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದಾರೆ. ಬಡವರಿಗೆ ನಿವೇಶನ, ಮನೆ ಕೊಡುವ ಯೋಜನೆಗಳನ್ನು ಸರ್ಕಾರ ಈಗಾಗಲೇ ಕಾರ್ಯಕ್ರಮ ರೂಪಿಸಿದೆ ಎಂದ ಅವರು, ಕೇಂದ್ರದ ಉಗ್ರಾಣದಲ್ಲಿ ಕೊಳೆಯುತ್ತಿರುವ ಅಕ್ಕಿ ಹಣ ನೀಡಿದರೂ ಕೊಡಲಿಲ್ಲ. ಈಗ ಮಳೆ ಕೊರತೆಯಿಂದ ವಿದ್ಯುತ್ ಅಭಾವ ಉಂಟಾಗಿದೆ. ಹಣ ಪಡೆದು ವಿದ್ಯುತ್ ಅಭಾವ ಸರಿದೂಗಿಸಲು ಕೋರಿದರೆ ವಿದ್ಯುತ್ ಪೂರೈಕೆ ಮಾಡುತ್ತಿಲ್ಲ.

> ಎಲ್ಲರೂ ಸಮಾನರು, ಎಲ್ಲರೂ ಒಂದು ಎನ್ನುವ ನೆಲೆಗಟ್ಟಿನಲ್ಲಿ ಕಾಂಗ್ರೆಸ್ ಆಡಳಿತ ಮಾಡುತ್ತಾ ದೇಶವನ್ನು ಕಟ್ಟುವ ಕೆಲಸವನ್ನು ಮಾಡಿದೆ. ಆದರೆ ಬಿಜೆಪಿ ಒಗ್ಗಟ್ಟನ್ನು ಮುರಿಯುವ ಕೆಲಸ ಮಾಡಿದ್ದರಿಂದ ರಾಜ್ಯದ ಜನತೆ ಬಿಜೆಪಿಗೆ ತಕ್ಕ ಪಾಠ ಕಲಿಸಿದ್ದಾರೆ. ಜಾತ್ಯತೀತ ಮನೋಭಾವನೆ ಹಾಗೂ ಸಂವಿಧಾನದ ಆಶಯ ಎಲ್ಲರಲ್ಲಿಯೂ ಮೂಡಲಿ ಎಂಬ ಉದ್ದೇಶದಿಂದ ರಾಜ್ಯ ಸರ್ಕಾರ ಸೆ.15ರಿಂದ ಪ್ರತಿಯೊಂದು ಶಾಲೆ, ಸಾರ್ವಜನಿಕ ಸಭೆಯಲ್ಲಿ ಸಂವಿಧಾನದ ಪೀಠಿಕೆ ಓದುವ ಕೆಲಸವನ್ನು ಮಾಡುತ್ತಿದೆ.
>
> – ಜಿ.ಎಸ್ ಪಾಟೀಲ. ಶಾಸಕರು.

ಇಂತಹ ಜನವಿರೋಧಿ ಬಿಜೆಪಿಯ ರಾಜಕಾರಣ-ಕ್ಕೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತಕ್ಕ ಉತ್ತರ ನೀಡುತ್ತೇವೆ ಎಂದರು.

ಟಕ್ಕೇದ ದರ್ಗಾದ ನಿಜಾಮುದ್ದೀನ್ ಷಾ ಅಶ್ರಫಿ ಸಾನ್ನಿಧ್ಯ ವಹಿಸಿದ್ದರು.

ಅಂಜುಮನ್ ಇಸ್ಲಾಂ ಕಮಿಟಿಯ ಚೇರಮನ್ ಮೊದಿನಸಾಬ ಮುಜಾವರ, ಗಜೇಂದ್ರಗಡ ಅಂಜುಮನ್ ಇಸ್ಲಾಂ ಕಮಿಟಿ ಚೇರಮನ್ ಹಸನ ತಟಗಾರ, ಗ್ರಾ.ಪಂ ಅಧ್ಯಕ್ಷೆ ನಿಂಗಮ್ಮ ಶಂಕ್ರಿ, ಗ್ರಾ.ಪಂ ಉಪಾಧ್ಯಕ್ಷ ಸಜ್ಜನರ, ಪುರಸಭೆ ಸದಸ್ಯರಾದ ರಾಜು ಸಾಂಗ್ಲೀಕರ, ಮುರ್ತುಜಾ ಡಾಲಾಯತ್, ಗ್ರಾ.ಪಂ ಸದಸ್ಯರಾದ ಬೀಬಿಜಾನ ಗಡಾದ, ಜನ್ನತಬಿ ನಧಾಫ್, ಸಿದ್ದಣ್ಣ ಬಂಡಿ, ರಫೀಕ್ ತೋರಗಲ್, ಶಶಿಧರ ಹೂಗಾರ, ಶರಣು ಪೂಜಾರ, ಎ.ಡಿ ಕೋಲಕಾರ, ಮುತ್ತಣ್ಣ ಮ್ಯಾಗೇರಿ, ಅಲ್ಲಾಸಾಬ ಮುಜಾವರ, ವಿ.ಬಿ ಹಪ್ಪಳದ, ಅಂದಪ್ಪ ಬಿಚ್ಚೂರ, ವಿ.ಬಿ ಸೋಮನಕಟ್ಟಿಮಠ, ಅರ್ಜುನ ರಾಠೋಡ, ದಾವಲಸಾಬ ಮುಜಾವರ, ಮಲ್ಲಿಕಾರ್ಜುನ ಗಾರಗಿ, ಇಮಾಮಸಾಬ ಬಾಗವಾನ ಮುಂತಾದವರಿದ್ದರು.

# ಜಕ್ಕಲಿಯ ಬಸವೇಶ್ವರ ಭಜನಾ ತಂಡ ಕಲಬುರ್ಗಿಗೆ ಪ್ರಯಾಣ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಶ್ರಾವಣ ಮಾಸದ ನಿಮಿತ್ತ ಶುಕ್ರವಾರ ಮುಂಜಾನೆ ಸಮೀಪದ ಜಕ್ಕಲಿ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದ 21 ಜನ ಭಜನಾ ಮಂಡಳಿಯ ಸದಸ್ಯರು ಭಜನಾ ಹಾಡುಗಳನ್ನು ಹಾಡಿಕೊಂಡು ಖಾಸಗಿ ವಾಹನ ಮೂಲಕ ಕಲಬುರ್ಗಿಯ ಶ್ರೀಶರಣ ಬಸವೇಶ್ವರ ದೇವಸ್ಥಾನದ ದರ್ಶನಕ್ಕೆ ಪ್ರಯಾಣ ಬೆಳೆಸಿದರು.



ಭಜನಾ ತಂಡದ ಮುಖ್ಯಸ್ಥ ಬಸವರಾಜ ಆದಿ ನೇತೃತ್ವದಲ್ಲಿ ಸದಸ್ಯರಾದ ಯಚ್ಚರಪ್ಪ ಕಮ್ಮಾರ, ಯಲ್ಲಪ್ಪ ಮಡಿವಾಳರ, ವಿನಾಯಕ ಉಮತಾರ, ಮುತ್ತಪ್ಪ ಮ್ಯಾಗೇರಿ, ಚನ್ನಪ್ಪ ನರೇಗಲ್ಲ, ಮಹಾಂತೇಶ ಮೆಣಸಗಿ, ಬಸವರಾಜ ಪಲ್ಲೇದ, ನಾಗರಾಜ ಸಂಗನಬಶೆಟ್ಟರ, ಸಿದ್ದಯ್ಯ ಮಠಪತಿ, ಜಗದೀಶ ಮೆಣಸಗಿ, ಮುತ್ತಪ್ಪ ಶ್ಯಾಶೆಟ್ಟಿ, ರವಿ ಪಲ್ಲೇದ, ಕಳಕಪ್ಪ ಹೊಗರಿ, ಶರಣಪ್ಪ ಮಂಗಳಗುಡ್ಡ, ಭಮ್ಮಲಿಂಗಪ್ಪ ಕಮ್ಮಾರ, ಶಿವಾನಂದ ಯಾವಗಲ್ಲ, ಶರಣಪ್ಪ ಹೂಗಾರ, ಆಕಾಶ ಯಾವಗಲ್ಲ, ರವಿ ಕಮ್ಮಾರ, ಮಣಿಕಂಠ ಸೂಡಿ ಸೇರಿದಂತೆ ಇನ್ನಿತರರು ತೆರಳಿದ್ದಾರೆ.

ಗಜೇಂದ್ರಗಡ, ಕುಷ್ಟಗಿ, ತಾವರಗೇರಾ, ಮುದಗಲ್ಲ ಮಾರ್ಗವಾಗಿ ಗುರಗುಂಟ ಅಮರೇಶ್ವರ, ತಿಂತಿಣಿ ಮೌನೇಶ್ವರ, ಯಾದಗಿರಿಯ ಮಲ್ಲಯ್ಯನ ದರ್ಶನ ಪಡೆದುಕೊಂಡು ರಾತ್ರಿ ಕಲಬುರ್ಗಿ ತಲುಪಲಾಗುವುದು ಎಂದು ಭಜನಾ ಮಂಡಳಿಯ ಸದಸ್ಯ ವಿನಾಯಕ ಉಮತಾರ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಗ್ರಾಮದ ಗುರು-ಹಿರಿಯರು, ಸಕಲ ಸದ್ಭಕ್ತರು ಭಕ್ತಿಪೂರ್ವಕವಾಗಿ ವಿಶೇಷ ಪೂಜೆ ಸಲ್ಲಿಸಿ, ಭಜನಾ ಸಮೂಹವನ್ನು ಸ್ವಾಗತಿಸಿ, ಭಕ್ತಿಯ ಕಾಣಿಕೆಯನ್ನು ನೀಡಿ, ಶುಭ ಹಾರೈಸಿ ಬೀಳ್ಕೊಟ್ಟರು.

# ಧರೆಗುರುಳಿದ ಬೃಹತ್ ಆಲದ ಮರ

■ವಿಜಯಸಾಕ್ಷಿ ಸುದ್ದಿ, ನರಗುಂದ

200 ವರ್ಷದ ಹಳೆಯದಾದ ಬೃಹತ್ ಆಲದ ಮರವೊಂದು ಶನಿವಾರ ಬೆಳಗಿನ ಜಾವ 4.45ರ ಹೊತ್ತಿಗೆ ನೆಲಕ್ಕುರುಳಿದೆ. ಈ ಘಟನೆಯಲ್ಲಿ 2 ವಾಹನಗಳು ಜಖಂಗೊಂಡಿದ್ದು, 5 ವಿದ್ಯುತ್ ಕಂಬಗಳು ಧರಾಶಾಹಿಯಾಗಿವೆ.



ಪಟ್ಟಣದ ದಂಡಾಪೂರದ ಶ್ರೀ ಉಡಚಾ ಪರಮೇಶ್ವರಿ ದೇವಸ್ಥಾನದ ಆವರಣದಲ್ಲಿನ ಕಟ್ಟೆಯ ಮೇಲಿನ ಆಲದಮರವು ಹಲವಾರು ವರ್ಷದಿಂದ ಮಂದಿರಕ್ಕೆ ಆಗಮಿಸಿದ ಸದ್ಭಕ್ತರಿಗೆ ನೆರಳನ್ನು ನೀಡುತ್ತಾ ಬಂದಿತ್ತು. ಶನಿವಾರ ಬೆಳಗಿನ ಜಾವ ಮರ ಬಿದ್ದಿದ್ದು, ರಸ್ತೆಯ ಮತ್ತೊಂದು ಬದಿಯಲ್ಲಿನ ಬಸು ಗಡೇಕಾರ ಅವರ ಟಂಟಂ ವಾಹನ, ಮಹಾದೇವಗೌಡ ಪಾಟೀಲ ಅವರ ಕಾರುಗಳನ್ನು ಜಖಂಗೊಳಿಸಿವೆ. ಸಮೀಪವೇ ಇದ್ದ ಜಗನ್ನಾಥರಾವ ಜೋಶಿ ಸೊಸೈಟಿ ಮತ್ತು ನಿರಂಜನ ಹೊಟೇಲ್‌ಗಳಿಗೂ ಹಾನಿಯಾಗಿದೆ. ಬಿದ್ದ ಬೃಹತ್ ಮರವನ್ನು ತೆರವುಗೊಳಿಸಲು 20 ಸಾವಿರ ಹಣವನ್ನು ಕ್ರೋಢೀಕರಿಸಿ, ಚೈನ್‌ಸಾ ಯಂತ್ರದ ಮೂಲಕ ಕತ್ತರಿಸಿ ಸ್ಥಳವನ್ನು ಮರವನ್ನು ತೆರವುಗೊಳಿಸಲಾಯಿತು. ಸ್ಥಳೀಕರಾದ ಪುರಸಭೆ ಸದಸ್ಯ ಪ್ರಶಾಂತ ಜೋಶಿ, ಫಕೀರಪ್ಪ ಸವದತ್ತಿ, ಎಮ್.ಎಲ್ ಪಾಟೀಲ, ರಾಜಣ್ಣ ರೋಖಡೆ, ವ್ಹಿ.ಎನ್ ಕೊಳ್ಳಿಯವರ, ಗೋಪಾಲ ತಡಹಾಳ, ಕೃಷ್ಣ ಮೋಹಿತೆ, ಧರ್ಮಾಜಿ ದುಶಿ, ಈರಣ್ಣ ನಾಯ್ಕರ, ಡಿ.ಪಿ ಪಾಟೀಲ, ನಾಗಪ್ಪ ಗುಡೇಕಾರ, ಗುರುರಾಜ ಸವಣೂರ, ಸಂಜು ಭೋಸಲೆ ಮುಂತಾದವರಿದ್ದರು.

# ಕಬ್ಬನ್ ಪಾರ್ಕ್‌ನಲ್ಲಿ ಪೊಲೀಸ್ ಸಂಕೀರ್ಣ ನಿರ್ಮಾಣ: ಪಾದಚಾರಿಗಳ ವಿರೋಧ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕಸ್ತೂರಬಾ ರಸ್ತೆಯಲ್ಲಿರುವ ಬೆಂಗಳೂರು ಕೇಂದ್ರ ಉಪ ಪೊಲೀಸ್ ಆಯುಕ್ತರ ಕಚೇರಿಯ ಪಕ್ಕದಲ್ಲಿ ಪೊಲೀಸ್ ಕಾಂಪ್ಲೆಕ್ಸ್ ನಿರ್ಮಾಣಕ್ಕೆ ಸರ್ಕಾರ ಮುಂದಾಗಿರುವುದಕ್ಕೆ ಕಬ್ಬನ್ ಪಾರ್ಕ್ ನಡಿಗೆದಾರರ ಸಂಘದ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸಂಘದ ಅಧ್ಯಕ್ಷ ಎಸ್ ಉಮೇಶ್ ಅವರು ಮಾತನಾಡಿ, ಕಬ್ಬನ್ ಪಾರ್ಕ್ 190 ಎಕರೆಗಳ ಭೂಮಿಯಲ್ಲಿದ್ದು, ಇದರಲ್ಲಿ ಅನೇಕ ಸಾರ್ವಜನಿಕ ಮತ್ತು ಖಾಸಗಿ ಕಟ್ಟಡಗಳಿವೆ. ಹೊಸ ಕಟ್ಟಡಕ್ಕೆ ವಿರೋಧ ವ್ಯಕ್ತಪಡಿಸದೇ ಹೋದಲ್ಲಿ ಈಗಿರುವ ಪರಿಸರ ನಾಶವಾಗುತ್ತದೆ ಎಂದು ಹೇಳಿದ್ದಾರೆ.



ಗದಗ ನಗರಕ್ಕೆ ಆಗಮಿಸಿದ್ದ ಗೃಹ ಸಚಿವ ಡಾ. ಜಿ.ಪರಮೇಶ್ವರ ಅವರನ್ನು ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಸನ್ಮಾನಿಸಲಾಯಿತು. ಕರವೇ ರಾಜ್ಯ ಮುಖಂಡ ಹನಮಂತಪ್ಪ ಅಬ್ಬಿಗೇರಿಯವರು ಕನ್ನಡಪರ ಹೋರಾಟಗಾರರು, ರೈತರು, ದಲಿತರ, ವಿದ್ಯಾರ್ಥಿಗಳ ಮೇಲೆ ಹಾಕಿರುವ ಮೊಕದ್ದಮೆಗಳನ್ನು ಹಿಂಪಡೆಯಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಕಾರ್ಯಕರ್ತರಾದ ಮಾರುತಿ ಈಳಗೇರ, ಕೃಷ್ಣ ಲಮಾಣಿ, ತೌಸಿಫ ಢಾಲಾಯತ, ಸಿರಾಜ್ ಹೊಸಮನಿ, ಅಕ್ಬರ್ ಅಲಿ, ಇರ್ಫಾನ್ ತಾಳಿಕೋಟಿ ಮುಂತಾದವರಿದ್ದರು.

## ನಿಧನ ವಾರ್ತೆ

### ನಿಲ್ಲಮ್ಮಾ ಬಳ್ಳಾರಿ(ಪಲ್ಲೇದ)



**ಮುಳಗುಂದ:** ಪಟ್ಟಣದ ಭೋಗೇರಿ ಓಣಿಯ ನಿವಾಸಿ ನಿಲ್ಲಮ್ಮಾ ಬಳ್ಳಾರಿ(ಪಲ್ಲೇದ) (91) ಶನಿವಾರ ನಿಧನರಾಗಿದ್ದಾರೆ.

ಮೃತರು ಮೂವರು ಪುತ್ರರು, ಆರು ಜನ ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ರೈತ ಸಂಪರ್ಕ ಕೇಂದ್ರದ ಅವ್ಯವಸ್ಥೆಯನ್ನು ಬಿಚ್ಚಿಟ್ಟ ರೈತರು

# ರೈತರ ಸಮಸ್ಯೆಗಳನ್ನು ನೀಗಿಸಿ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಇಲ್ಲಿನ ರೈತ ಸಂಪರ್ಕ ಕೇಂದ್ರದ ಅವ್ಯವಸ್ಥೆಯನ್ನು ರೈತರು ಸಹಾಯಕ ಕೃಷಿ ಅಧಿಕಾರಿ ರವೀಂದ್ರಗೌಡ ಪಾಟೀಲರ ಎದುರು ಬಿಚ್ಚಿಟ್ಟ ಪ್ರಸಂಗ ನಡೆಯಿತು.

ಇಲ್ಲಿನ ರೈತ ಸಂಪರ್ಕ ಕೇಂದ್ರದ ಅಧಿಕಾರಿಗೆ ನರೇಗಲ್ಲ ಮತ್ತು ಗಜೇಂದ್ರಗಡ ಕೇಂದ್ರಗಳ ಅಧಿಕಾರ ನೀಡಲಾಗಿದೆ. ಹೀಗಾಗಿ ತಾಲೂಕಿನಲ್ಲಿಯೇ ಅತ್ಯಂತ ದೊಡ್ಡ ಹೋಬಳಿಯಾಗಿರುವ ನರೇಗಲ್ಲಕ್ಕೆ ಪೂರ್ಣ ಪ್ರಮಾಣದ ನ್ಯಾಯವನ್ನು ಒದಗಿಸಲು ಕೃಷಿ ಅಧಿಕಾರಿ ಕಮ್ಮಾರ ಅವರಿಂದ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅವರನ್ನು ಪೂರ್ಣಪ್ರಮಾಣದಲ್ಲಿ ಇಲ್ಲಿಯೇ ಉಳಿಯುವಂತೆ ಮಾಡಿ ಎಂದು ಎಸ್.ಎ ಪಾಟೀಲ ಆಗ್ರಹಿಸಿದರು.

ನಾವು ಸ್ಪ್ರಿಂಕ್ಲರ್‌ಗಳಿಗಾಗಿ ಬಿಲ್ ತುಂಬಿ ಅದೆಷ್ಟೋ ದಿನಗಳಾಯಿತು. ಈವರೆಗೂ ಸ್ಪ್ರಿಂಕ್ಲರ್ ಬಂದಿಲ್ಲ. ಕೇಳಿದಾಗೆಲ್ಲ ಸಬೂಬುಗಳನ್ನು ಹೇಳುತ್ತಲೇ ಇಲ್ಲಿನ ಸಿಬ್ಬಂದಿ ದಿನ ದೂಡುತ್ತಿದ್ದಾರೆ. ನಮ್ಮ ವಸ್ತುಗಳು ನಮಗೆ ಸಿಗುವುದು ಯಾವಾಗ ಎಂದು ಎಂ.ಎಸ್. ದಢೇಸೂರಮಠ ಖಾರವಾಗಿ ಪ್ರಶ್ನಿಸಿದರು.

> ರೈತರಿಗೆ ಸಿಗುವ ವಿಮಾ ಹಣ ಪರಿಹಾರದ ಬಗ್ಗೆ ಯಾವುದೇ ಮಾಹಿತಿ ಈ ಕೇಂದ್ರದಿಂದ ರೈತರಿಗೆ ಸಿಗುತ್ತಿಲ್ಲ. ಹೀಗಾಗಿ ರೈತರು ಬೆಳೆ ವಿಮಾ ಪರಿಹಾರದಿಂದ ವಂಚಿತರಾಗಿದ್ದಾರೆ. ಯಾವುದೇ ವಸ್ತುವನ್ನು ಮಾರಾಟ ಮಾಡಿದರೂ ತಕ್ಷಣ ಅದಕ್ಕೆ ರಸೀದಿ ನೀಡಬೇಕೆಂದು ರೈತರಾದ ರೈತ ಮಲ್ಲರಡ್ಡೆಪ್ಪ ರಡ್ಡೇರ, ಬಾಳಪ್ಪ ಸೋಮಗೊಂಡ ಅಧಿಕಾರಿಗಳನ್ನು ಆಗ್ರಹಿಸಿದರು.

ಎಲ್ಲ ದೂರುಗಳನ್ನು ಆಲಿಸಿದ ಸಹಾಯಕ ಕೃಷಿ ಅಧಿಕಾರಿ ರವೀಂದ್ರಗೌಡ ಪಾಟೀಲ ಮಾತನಾಡಿ,. ಮಣ್ಣು ಪರೀಕ್ಷಾ ಕೇಂದ್ರವು ಜಿಲ್ಲೆಗೊಂದರಂತೆ ಇದ್ದು, ನಿಮ್ಮ ಹೊಲದ ಮಣ್ಣನ್ನು ಪರೀಕ್ಷೆ ಮಾಡಿಸಲು ಕ್ರಮಕೈಗೊಳ್ಳುವ ಭರವಸೆ ನೀಡಿದರು. ಸಂಪರ್ಕ ಕೇಂದ್ರಕ್ಕೆ ಬರುವ ವಸ್ತುಗಳ ಬಗ್ಗೆ, ರಿಯಾಯತಿ ಬಗ್ಗೆ ಸ್ಥಳೀಯ ಮಾಧ್ಯಮದವರಿಗೆ ಸೂಕ್ತ ಮಾಹಿತಿ ನೀಡಿ ಅವುಗಳು ಪತ್ರಿಕೆಗಳಲ್ಲಿ ಪ್ರಕಟವಾಗುವಂತೆ ನೋಡಿಕೊಳ್ಳಬೇಕೆಂದು ಕೃಷಿ ಅಧಿಕಾರಿ ಕಮ್ಮಾರವರಿಗೆ ಪಾಟೀಲ ಆದೇಶಿಸಿದರು.

ಅಲ್ಲದೆ, ಇದೇ ರೀತಿ ಮುಂದುವರೆದರೆ, ಕ್ರಮ ಜರುಗಿಸಲು ಮೇಲಾಧಿಕಾರಿಗಳಿಗೆ ಪತ್ರ ಬರೆಯವುದಾಗಿ ಎಚ್ಚರಿಸಿದರು.

ಈ ಸಂದರ್ಭದಲ್ಲಿ ರೈತರಾದ ಅಶೋಕ ಧರ್ಮಾಯತ, ಜಗದೀಶ ಸಂಕನಗೌಡ್ರ, ಶಿದ್ದಯ್ಯ ಅರಳೆಲೆಮಠ, ಅಂದಪ್ಪ ವೀರಾಪೂರ, ಸಿ.ಕೆ ಕುಷ್ಟಗಿ, ಶಶಿಧರ ಓದುಸೂಮಠ, ಎಂ.ಬಿ ಸೋಮಗೊಂಡ ಮುಂತಾದವರಿದ್ದರು.

ಅಡವೀಂದ್ರ ಸ್ವಾಮಿ ಮಠದಲ್ಲಿ ಮಾಸಿಕ ಶಿವಾನುಭವ ಗೋಷ್ಠಿ

# ಆತ್ಮಸಾಕ್ಷಾತ್ಕಾರದಿಂದ ಮನುಷ್ಯನಿಗೆ ಜೀವನ್ಮುಕ್ತಿ



■ವಿಜಯಸಾಕ್ಷಿ ಸುದ್ದಿ, ಗದಗ

ತೀರ್ಥಕ್ಷೇತ್ರಗಳ ದರ್ಶನದಿಂದ ಜೀವನ್ಮುಕ್ತಿ ದೊರೆಯುವದಿಲ್ಲ. ನಮ್ಮ ಆಚರಣೆ ಆತ್ಮಸಾಕ್ಷಾತ್ಕಾರ ಆದಾಗ ಮಾತ್ರ ಮನುಷ್ಯನಿಗೆ ಜೀವನ್ಮುಕ್ತಿ ಸಾಧ್ಯ ಎಂದು ಕೃಷ್ಣ ಪರಮಾತ್ಮನು ಅರ್ಜುನನಿಗೆ ಉಪದೇಶ ನೀಡಿದರು. ಅದಕ್ಕಾಗಿ ತೀರ್ಥ ಕ್ಷೇತ್ರಗಳ ದರ್ಶನದೊಂದಿಗೆ ಆತ್ಮಸಾಕ್ಷಾತ್ಕಾರವನ್ನು ಹೊಂದಲು ಧರ್ಮದ ಹಾದಿಯಲ್ಲಿ ನಾವು ಸಾಗಬೇಕೆಂದು ಅಡ್ನೂರ-ಗದಗ ದಾಸೋಹಮಠದ ಪೂಜ್ಯ ಅಭಿನವ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಅವರು ಗದುಗಿನ ಅಡವೀಂದ್ರ ಸ್ವಾಮಿ ಮಠದಲ್ಲಿ ನಡೆದ ಮಾಸಿಕ ಶಿವಾನುಭವ ಗೋಷ್ಠಿಯ ಸಾನ್ನಿಧ್ಯ ವಹಿಸಿ ಮಾತನಾಡಿ, ತೀರ್ಥಕ್ಷೇತ್ರಗಳ ದರ್ಶನ ಮಹಾತ್ಮರ, ಪುಣ್ಯಪುರುಷರ ದರ್ಶನದಿಂದ ಮುಕ್ತಿ ದೊರೆಯುವದರೊಂದಿಗೆ ಆತ್ಮ ಸಂಸ್ಕಾರಗೊಳ್ಳುತ್ತದೆ. ನಮ್ಮಲ್ಲಿ ಧರ್ಮ ಜಾಗೃತಿಗೊಳ್ಳುತ್ತದೆ ಎಂದರು.

ಪುಣ್ಯಕ್ಷೇತ್ರಗಳ ದರ್ಶನದಿಂದ ಜೀವನ್ಮುಕ್ತಿ ವಿಷಯವಾಗಿ ಶಾರದಾ ಕೋಟಿ ಉಪನ್ಯಾಸ ನೀಡಿ, ತೀರ್ಥ ಕ್ಷೇತ್ರಗಳ ದರ್ಶನದ ಭಕ್ತಿ ಭಾವ, ಅಂತರಂಗದ ಸಂಬಂಧಕ್ಕೂ, ನಾವು ಮಾಡುವ ದಿನನಿತ್ಯದ ದೇವರ ಪೂಜೆಗೂ, ನಮ್ಮ ಸುತ್ತಲಿನ ಪರಿಸರಕ್ಕೂ ಇರುವ ಅಂತರ ಸಂಬಂಧಗಳ ಕುರಿತು ವಿವರಿಸಿದರು.ಇದೇ ಸಂದರ್ಭದಲ್ಲಿ ಗದುಗಿನ ಪ್ರಜಾಪಿತ ಈಶ್ವರಿ ವಿ.ವಿಯ ಅಕ್ಕಂದಿರು ರಾಖಿ ಕಟ್ಟಿ ರಾಖಿಯ ಮಹತ್ವ ಕುರಿತು ಮಾತನಾಡಿದರು.

> ಶ್ರಾವಣ ಸಂಜೆ ಕಾರ್ಯಕ್ರಮದ ಅಂಗವಾಗಿ ಮಾಗಡಿ ಗ್ರಾಮದ ಫಕ್ಕೀರಯ್ಯ ಶಾಸ್ತ್ರೀಗಳು ಕಲ್ಯಾಣಮಠ ಹಾಗೂ ಗದುಗಿನ ವೀರೇಶ್ವರ ಪುಣ್ಯಾಶ್ರಮದ ಕಲಾವಿದ ರಾಹುಲ್ ರಾಠೋಡ ಮತ್ತು ಸಂಗಡಿಗರಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಸಿದ್ಧಲಿಂಗಪ್ಪ ಕೋಟಿ, ಅಕ್ಕಮಹಾದೇವಿ ಕೋಟಿ, ಅನ್ನಪೂರ್ಣ ಶೆಟ್ಟರ, ದ್ರಾಕ್ಷಾಯಣಿ ಚಿಂತಾಮಣಿ ಅವರು ಕಾಶೀ ಯಾತ್ರೆ ಪೂರೈಸಿದ್ದಕ್ಕಾಗಿ ಶ್ರೀಮಠದಿಂದ ಗುರುರಕ್ಷೆ ನೀಡಿ ಸನ್ಮಾನಿಸಲಾಯಿತು.

ಸಮ್ಮುಖ ವಹಿಸಿದ್ದ ಶ್ರೀಮಠದ ಧರ್ಮದರ್ಶಿ ವೇ.ಮೂ ಮಹೇಶ್ವರ ಸ್ವಾಮಿಗಳು ಹೊಸಳ್ಳಿಮಠ ಮಾತನಾಡಿ, ಧಾರ್ಮಿಕ ಕೇತ್ರಗಳ ದರ್ಶನದಿಂದ ಮನಸ್ಸು ಪ್ರಫುಲ್ಲಗೊಳ್ಳುತ್ತದೆ. ದೇವರು, ಧರ್ಮ ಮನುಷ್ಯನನ್ನು ಸನ್ಮಾರ್ಗದತ್ತ ಕೊಂಡೊಯ್ಯುತ್ತದೆ ಎಂದರು. ಅಧ್ಯಕ್ಷತೆಯನ್ನು ವ್ಹಿ.ಎಂ ಕುಂದ್ರಾಳಹಿರೇಮಠ ವಹಿಸಿದ್ದರು. ಪ್ರಸಾದ ಸೇವೆ ವಹಿಸಿಕೊಂಡಿದ್ದ ವೀರಣ್ಣ ಉಪ್ಪಿನ, ಶೋಭಾ ಹೆರಕಲ್ಲ, ಶರೀಫಸಾಬ ಹೊಸಳ್ಳಿ ಅವರನ್ನು ಆಶೀರ್ವದಿಸಲಾಯಿತು. ಎಸ್.ಬಿ ಭಜಂತ್ರಿ ಅವರಿಂದ ಶಹನಾಯ್ ವಾದನ ಜರುಗಿತು. ನಿಂಗಪ್ಪ ಬಳಿಗಾರ ಸ್ವಾಗತಿಸಿದರು, ಯು.ಆರ್ ಭೂಸನೂರಮಠ ನಿರೂಪಿಸಿದರು. ಪಿ.ಬಿ ಬಂಡಿ ವಂದಿಸಿದರು.

ಶ್ರೀಮಠದ ಭಕ್ತರಾದ ದಿ.ಎಂ ಬಸಪ್ಪ ಅವರ ಅಗಲುವಿಕೆಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಗಂಗಣ್ಣ ಕೋಟಿ, ಬಿ.ಎಂ ಬಿಳೇಯಲಿ, ಕೆ.ಎಚ್ ಬೇಲೂರ, ಮುಧೋಳ, ಪಿ.ಟಿ ನಾರಾಯಣಪೂರ, ಪಿ.ಸಿ ಪುರಾಣಿಕಮಠ, ಬಸವರಾಜ ಪಲ್ಲೇದ, ವ್ಹಿ.ಎಸ್ ಸಜ್ಜನ, ಸಿದ್ಧಣ್ಣ ಜವಳಿ ಹಾಗೂ ಮಹಿಳಾ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka